ಇ-ಮೇಲ್: pckvkraichur@uasraichur.edu.in ದೂರವಾಣಿ ಮತ್ತು ಫ್ಯಾಕ್ಸ: 08532-220196

# ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

## ಐ.ಸಿ.ಎ.ಆರ್ -ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಅಂಚೆ ಪೆಟ್ಟಿಗೆ ಸಂಖ್ಯೆ: 329, ರಾಯಚೂರು-584102

ಸಂಖ್ಯೆ:ಹಿವಿಮಮು/ಕೃವಿಕೇ/ರಾ/140 /2019-20 /2618 ದಿನಾಂಕ: 09.07.2019

ಗೆ,
ಅಧ್ಯಕ್ಷರು
ಕರ್ನಾಟಕ ಕೃಷಿ ಬೆಲೆ ಆಯೋಗ
ಬೆಂಗಳೂರು

ಮಾನ್ಯರೇ,

(ಮೇಲಾಧಿಕಾರಿಗಳ ಮುಖಾಂತರ)

ವಿಷಯ :- ಮೂರು ವರ್ಷಗಳ ಪ್ರಗತಿ ವರದಿ ಕಳುಹಿಸುವ ಕುರಿತು.

ಉಲ್ಲೇಖ:- ಕಕೃಬೆಆ/2019-20 ದಿನಾಂಕ: 01.07.2019

** ** **

ಮೇಲ್ಕಂಡ ವಿಷಯಕ್ಕೆ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಮ್ಮಲ್ಲಿ ಸಾದರಪಡಿಸುವುದೇನೆಂದರೆ, ಕರ್ನಾಟಕ ಕೃಷಿ ಬೆಲೆ ಆಯೋಗದ ಹಾಗೂ ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನ ದತ್ತು ಗ್ರಾಮವಾದ ಜಕ್ಕಲದಿನ್ನಿಯ "ರೈತರ ಆದಾಯ ಮತ್ತು ಕಲ್ಯಾಣ ಅಭಿವೃದ್ಧಿ" ಯೋಜನೆಯ ಮೂರು ವರ್ಷಗಳ (2016-17, 2017-18 ಹಾಗೂ 2018-19) ಪ್ರಗತಿ ವರದಿಯನ್ನು ತಮ್ಮ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸುತ್ತಿದ್ದೇವೆ.

ಧನ್ಯವಾದಗಳೊಂದಿಗೆ,

DDA (KAPC)/TC
Pl. put up
[signature] 10/7/19

ತಮ್ಮ ವಿಶ್ವಾಸಿ,

[signature]
for ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,
ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ,
ರಾಯಚೂರು.

Forwarded to the Director of Extension for Kind approval and onward transmission.
with regards. [signature]
for

Directorate of Extension
UAS, RAICHUR
Inward No. 3842

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಮತ್ತು ಕರ್ನಾಟಕ ಕೃಷಿ ಬೆಲೆ ಅಯೋಗ, ಬೆಂಗಳೂರು

# ಪ್ರಗತಿ ವರದಿ

# (2016–17 ರಿಂದ 2018–19)

# "ರೈತರ ಆದಾಯ ಮತ್ತು ಕಲ್ಯಾಣಭಿವೃದ್ಧಿ"


**ಡಾ. ಜಿ.ಎಸ್. ಯಡಹಳ್ಳಿ**

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಇಮೇಲ್ ಐ.ಡಿ.: pckvkraichur@uasraichur.edu.in

ಮೊಬೈಲ್ ನಂ: 09480696314

**ಡಾ. ಟಿ.ಎನ್. ಪ್ರಕಾಶ ಕಮ್ಮರಡಿ**

ಅಧ್ಯಕ್ಷರು

ಕರ್ನಾಟಕ ಕೃಷಿ ಬೆಲೆ ಆಯೋಗ, ಕೃಷಿ ಇಲಾಖೆ,

ಶೇಷಾದ್ರಿ ರಸ್ತೆ. ಸಂಖ್ಯೆ:1, ಎಸ್.ಜೆ.ಪಿ. ಕಾಲೇಜು ಎದುರಗಡೆ,

ಬೆಂಗಳೂರು–560001

# ರೈತರ ಆದಾಯ ಮತ್ತು ಕಲ್ಯಾಣಭಿವೃದ್ಧಿ

## ಹಿನ್ನಲೆ:

ಭಾರತೀಯ ಕೃಷಿ ಪದ್ಧತಿ ಇಂದು ಅಪಾಯ ಮಟ್ಟದಲ್ಲಿದೆ. ಕ್ಷಿಣಿಸುತ್ತಿರುವ ಭೂಸ್ವಾಧಿನಗಳು, ಬೆಲೆ ಏರುಪೇರು ಮತ್ತು ಹವಾಮಾನ ವೈಪರಿತ್ಯದ ಪ್ರಮುಖ ಸವಾಲುಗಳನ್ನು ರೈತರು ಎದುರಿಸುತ್ತಿದ್ದಾರೆ. ದೇಶಿಯ ಮತ್ತು ಜಾಗತಿಕ ಮಾರುಕಟ್ಟೆಗಳು ಹೆಚ್ಚುತ್ತಿರುವ ಆಹಾರ ಬೇಡಿಕೆ ಭಾರಿ ಅವಕಾಶಗಳ ನೀಡುತ್ತಿವೆ. ರೈತರ ಆದಾಯವನ್ನು ವಿಶೇಷವಾಗಿ ಸಣ್ಣ ಮತ್ತು ಅತೀ ಸಣ್ಣ ರೈತರ ಆದಾಯವನ್ನು ಹೆಚ್ಚಿಸುವುದು ಹೇಗೆ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. ಭಾರತದಲ್ಲಿ ಶೇಕಡ 86 ಕ್ಕಿಂತ ಹೆಚ್ಚು ಸಣ್ಣ ಮತ್ತು ಅತೀ ಸಣ್ಣ ರೈತರಿದ್ದು, ಎರಡು ಹೇಕ್ಟರಗಿಂತ ಕಡಿಮೆ ಭೂಮಿಯನ್ನು ಹೊಂದಿರುತ್ತಾರೆ. ಕೃಷಿ ಆದಾಯವನ್ನು ಹೆಚ್ಚಿಸಲು ಸರ್ಕಾರವು ಹಲವಾರು ಹೊಸ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಪ್ರಾರಂಭಿಸಿದೆ. ಇದರಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಯ್ ಯೋಜನೆ, ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆ ಮತ್ತು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಗಳು ಇವೆ.

ರೈತರ ಅದಾಯವನ್ನು ಪರಿಣಾಮಕಾರಿಯಾಗಿ ಹೆಚ್ಚಿಸಲು ಕರ್ನಾಟಕ ಸರ್ಕಾರ 2013 ರಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗವನ್ನು ಸ್ಥಾಪಿಸಲಾಯಿತು. ಈ ಆಯೋಗವು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಬೆಲೆ ನೀತಿ ಪ್ರವರ್ತಕ ಪಾತ್ರವನ್ನು ವಹಿಸುತ್ತದೆ. ಈ ಆಯೋಗವು ಉತ್ಪಾದನಾ ಆಧಾರಿತ ಹೂಡಿಕೆ ಮತ್ತು ತಂತ್ರಜ್ಞಾನಕ್ಕೆ ಹೋಗಲು ರೈತರನ್ನು ಪ್ರೇರೇಪಿಸಲು ಪ್ರೋತ್ಸಾಹ ಧನ ನೀಡುವ ಪ್ರಮುಖ ಸಾಧನವಾಗಿದೆ. ಕೃಷಿ ಬೆಲೆ ಆಯೋಗದ ಮುಖ್ಯ ಉದ್ದೇಶ ಗ್ರಾಹಕರ ಬೆಲೆಯ ಗರಿಷ್ಟ ಪಾಲನ್ನು ಖಚಿತಪಡಿಸುವುದು, ರಾಜ್ಯ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವುದು, ಕೃಷಿ ಉತ್ಪನ್ನಗಳ ಮೇಲೆ ಸಂಭಾವನೆ ನೀಡುವ ಬೆಲೆಯನ್ನು ಒದಗಿಸುವುದು ಮತ್ತು ಸೂಕ್ತವಾದ ಮಾರುಕಟ್ಟೆ ವ್ಯವಸ್ಥೆಯನ್ನು ಒದಗಿಸುವುದು.

## ಕೃಷಿ ಬೆಲೆ ಅಯೋಗದ ದೃಷ್ಟಿಕೋನ:

ರೈತರಿಗೆ ಗ್ರಾಹಕರ ಬೆಲೆಯಲ್ಲಿ ಗರಿಷ್ಟ ಪಾಲು ಖಚಿತ ಪಡಿಸುವುದು, ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧನೆ, ಆಹಾರ ಭದ್ರತಾ ಅಗತ್ಯಗಳ ಪೂರೈಕೆ, ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ. ಕರ್ನಾಟಕ ಕೃಷಿ ಬೆಲೆ ಆಯೋಗದ ಮುಖ್ಯ ದೃಷ್ಟಿಕೋನವಾಗಿರುತ್ತದೆ.

## ಕೃಷಿ ಬೆಲೆ ಅಯೋಗದ ಧ್ಯೇಯ:

ಕೃಷಿ ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಅಧಿಕ ಉತ್ಪಾದನೆ ಸಮಯದಲ್ಲಿ 'ಮಾರುಕಟ್ಟೆ ಮಧ್ಯ-ಪ್ರವೇಶ', (Market Intervention) ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಸಾಮೂಹಿಕ ಚೌಕಾಸಿ ಸಾಮರ್ಥ್ಯ (Collective Bargaining Power) ಹೆಚ್ಚಿಸುವುದು, ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ-ವ್ಯಾಪಾರಗಳ ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ ಮತ್ತು ಪ್ರದೇಶಗಳ ರೈತರ ಹಿತ ಕಾಪಾಡುವುದು ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ.

# ರೈತರ ಆದಾಯ ಮತ್ತು ಕಲ್ಯಾಣಭಿವೃದ್ಧಿ

| ಕ್ರ.ಸಂ. | | ವಿಜ್ಞಾನಿಯ ಹೆಸರು | ಹುದ್ದೆ |
|---|---|---|---|
| 1 | ಪ್ರಧಾನ ಸಂಶೋಧಕರು: | ಡಾ. ಜಿ.ಎಸ್. ಯಡಹಳ್ಳಿ | ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು |
| 2 | ಸಹ ಸಂಶೋಧಕರು: | ಡಾ. ಅನುಪಮಾ ಸಿ. | ವಿಜ್ಞಾನಿ (ಗೃಹ ವಿಜ್ಞಾನ) ಕೃಷಿ ವಿಜ್ಞಾನ ಕೇಂದ್ರ, ರಾಯಚೂರು |
| 3 | | ಡಾ. ಪ್ರಹ್ಲಾದ | ವಿಜ್ಞಾನಿ (ಪ್ರಾಣಿ ವಿಜ್ಞಾನ) ಕೃಷಿ ವಿಜ್ಞಾನ ಕೇಂದ್ರ, ರಾಯಚೂರು |
| 4 | | ಡಾ. ಹೇಮಲತಾ ಕೆ.ಜೆ. | ವಿಜ್ಞಾನಿ (ತೋಟಗಾರಿಕೆ) ಕೃಷಿ ವಿಜ್ಞಾನ ಕೇಂದ್ರ, ರಾಯಚೂರು |
| 5 | | ಡಾ. ಶ್ರೀವಾಣಿ ಜೆ.ಎನ್. | ವಿಜ್ಞಾನಿ (ಕೃಷಿ ಕೀಟಶಾಸ್ತ್ರ) ಕೃಷಿ ವಿಜ್ಞಾನ ಕೇಂದ್ರ, ರಾಯಚೂರು |
| 6 | ತಂತ್ರಜ್ಞಾನ ಸಹಾಯಕರು: | ಡಾ. ನಾಗರಾಜ | ಕೃಷಿ ವಿಜ್ಞಾನ ಕೆಂದ್ರ, ರಾಯಚೂರು |
| 7 | ಕ್ಷೇತ್ರ ಸಹಾಯಕರು: | ಶ್ರೀ. ಶಿವಪ್ಪ | ಕೃಷಿ ವಿಜ್ಞಾನ ಕೆಂದ್ರ, ರಾಯಚೂರು |

**ಪ್ರಾಯೋಗಿಕ ಕಾರ್ಯಯೋಜನೆಯ ಮುಖ್ಯ ಉದ್ದೇಶಗಳು**

1. **ಕೃಷಿ ಅಭಿವೃದ್ಧಿಗೆ ಲಭ್ಯವಿರುವ ಪ್ರತಿಯೊಂದು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸುವುದು**
2. **ಅಭಿವೃದ್ಧಿ ಇಲಾಖೆಗಳ ಎಲ್ಲಾ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಅನುಷ್ಠಾನಗೊಳಿಸುವುದು**
3. **ಕೃಷಿ ಪರಿಕರಗಳನ್ನು ಸಮರ್ಪಕವಾಗಿ ಬಳಸುವುದು**
4. **ಉತ್ಪಾದಕತೆಯನ್ನು ಅಧಿಕಗೊಳಿಸುವುದು ಹಾಗೂ ಉತ್ಪಾದನಾ ವೆಚ್ಚವನ್ನು ಇಳಿಸಿ ಲಾಭದಾಯಕ ಬೆಲೆ ಸಿಗುವಂತೆ ಮಾಡುವುದು**
5. **ಮಣ್ಣು ಆರೋಗ್ಯ ಸೂಚಿಸುವ ಚೀಟಿ ನೀಡಿ ಅದರ ಅನುಷ್ಠಾನದ ಮೂಲಕ ಫಲವತ್ತತೆಯನ್ನು ಹೆಚ್ಚಿಸುವುದು**
6. **ಸಾವಯವ ಕೃಷಿಯನ್ನು ಪ್ರೋತ್ಸಾಹಿಸುವುದು**
7. **ನೀರಿನ ಸಮರ್ಥ ಸದ್ಬಳಕೆ ಮಾಡುವುದು**
8. **ಕೃಷಿ ಉತ್ಪನ್ನಗಳ ಆನ್‌ಲೈನ್ ಮಾರುಕಟ್ಟೆಗೆ ವಿಶೇಷ ಗಮನ ಹರಿಸುವುದು**
9. **ಕನಿಷ್ಠ ಬೆಂಬಲ ಬೆಲೆ ಯೋಜನೆಯನ್ನು ದಕ್ಷತೆಯಿಂದ ಅನುಷ್ಠಾನಗೊಳಿಸುವುದು**


## ಯೋಜನೆಯ ಉದ್ಘಾಟನೆ:

ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ.ಎನ್. ಪ್ರಕಾಶ ಕಮ್ಮರಡಿಯವರು ದಿನಾಂಕ: 19.07.2017 ರಂದು ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ ಜಕ್ಕಲದಿನ್ನಿ ಗ್ರಾಮದಲ್ಲಿ ಈ ಯೋಜನೆಯನ್ನು ಉದ್ಘಾಟಿಸಿದರು ಹಾಗೂ ಕೃಷಿ ಬೆಲೆ ಆಯೋಗದ ಒಂದು ಕಿರುಹೊತ್ತಿಗೆಯನ್ನು ರೈತರಿಗೆ ವಿತರಿಸಿದರು.

## ರಾಯಚೂರು ಜಿಲ್ಲೆಯ ಆಯ್ದ ಗ್ರಾಮದ ವಿವರ:

ಜಕ್ಕಲದಿನ್ನಿ ಗ್ರಾಮದ ಒಟ್ಟು ಭೌಗೋಳಿಕ ವಿಸ್ಥೀರ್ಣವು 1600 ಎಕರೆ ಇದ್ದು, ಈ ಗ್ರಾಮವು ಜಿಲ್ಲಾ ಮುಖ್ಯ ಕೇಂದ್ರ ಕಛೇರಿ ರಾಯಚೂರಿನಿಂದ 32 ಕಿ.ಮೀ. ಹಾಗೂ ಮಾನವಿ ತಾಲ್ಲೂಕಿನಿಂದ 35 ಕಿ.ಮೀ. ದೂರವಿರುತ್ತದೆ ಮತ್ತು ಅತ್ತನೂರು ಗ್ರಾಮ ಪಂಚಾಯಿತಿಗೆ ಸೇರಿರುತ್ತದೆ.

# ಜಕ್ಕಲದಿನ್ನಿ ಗ್ರಾಮದ ಉಪಗ್ರಹದ ನಕ್ಷೆ







# ಜಕ್ಕಲದಿನ್ನಿ ಗ್ರಾಮದ ಮೂಲ ಮಾಹಿತಿ

| ಕ್ರ. ಸಂ. | ವಿವರ | ಸಂಖ್ಯೆ |
|---|---|---|
| 1 | ಒಟ್ಟು ಜನಸಂಖ್ಯೆ | 1972 |
| | ಕುಟುಂಬಗಳು | 350 |
| | ಪುರುಷ | 971 |
| | ಮಹಿಳೆ | 1001 |
| | ಎಸ್.ಸಿ. | 247 |
| | ಎಸ್.ಟಿ. | 384 |
| | ಅಂಗವಿಕಲರು | 08 |
| | ವಾರ್ಷಿಕ ಕುಟುಂಬ ಆದಾಯ (ರೂ./ವರ್ಷ) | - |
| 2 | ಶೇಕಡವಾರು ಸಾಕ್ಷರತೆ | |
| | ಪುರುಷ | 45% |
| | ಮಹಿಳೆ | 65% |
| 3 | ಕಾರ್ಮಿಕರು | |
| | ಪುರುಷ | |
| | ಮಹಿಳೆ | |
| 4 | ಶಿಕ್ಷಣ ಸಂಸ್ಥೆಗಳು | |
| | ಅಂಗನವಾಡಿ | 02 |
| | ಪ್ರಾಥಮಿಕ ಶಾಲೆಗಳು | 01 |
| | ಹಿರಿಯ ಪ್ರಾಥಮಿಕ ಶಾಲೆಗಳು | - |
| | ಪದವಿ ಪೂರ್ವ ಕಾಲೇಜ್ | - |
| | ಪದವಿ ಕಾಲೇಜ್ | - |
| | ಇತರೆ | - |
| 5 | ಆರೋಗ್ಯ ಸಂಸ್ಥೆಗಳು | |
| | ಸಿ.ಎಚ್.ಸಿ. | - |
| | ಪಿ.ಎಚ್.ಸಿ. | - |
| | ಪಿ.ಎಚ್.ಯು | - |
| | ಎ.ಎನ್.ಎಂ. | 01 |
| | ಇತರೆ | - |

| | | |
|---|---|---|
| 6 | ಆರ್ಥಿಕ ಸಂಸ್ಥೆಗಳು | |
| | ಸಹಕಾರಿ ಸಂಸ್ಥೆಗಳು | - |
| | ಪಿ.ಎಲ್.ಡಿ. ಬ್ಯಾಂಕ್ | - |
| | ಸಹಕಾರಿ ಬ್ಯಾಂಕ್ | - |
| | ಸ್ಥಳೀಯ ಗ್ರಾಮೀಣ ಬ್ಯಾಂಕ್ | - |
| | ರಾಷ್ಟ್ರೀಕೃತ ಬ್ಯಾಂಕ್ | - |
| | ಇತರೆ | - |
| 7 | ನೋಂದಾಯಿತ ಮಾರುಕಟ್ಟೆಗಳು | - |
| 8 | ಹತ್ತಿರದ ಮಾರುಕಟ್ಟೆಗಳು | ಸಿರವಾರ |
| 9 | ರಸಗೊಬ್ಬರ/ಕೀಟನಾಶಕ ಅಂಗಡಿಗಳು | 01 |
| 10 | ರೈತ ಸಹಕಾರಿ ಸಂಸ್ಥೆಗಳು (ಎಸ್.ಎಚ್.ಜಿ./ಎಫ್.ಪಿ.ಓ.) | - |
| 11 | ವಿ.ಎಚ್.ಸಿ. | - |
| 12 | ಹಾಲು ಖರೀದಿ ಕೇಂದ್ರ | - |

| | **ಕೃಷಿ ಮತ್ತು ಕೃಷಿ ಸಂಬಂಧಿತ ಮಾಹಿತಿ** | |
|---|---|---|
| 1 | ಭೌಗೋಳಿಕ ಪ್ರದೇಶ (ಹೇ.) | 1600 |
| 2 | ಬೇಸಾಯ ಪ್ರದೇಶ (ಹೇ.) | 12 |
| | ನೀರಾವರಿ (ಹೇ.) | 400 |
| | ಖುಷಿ (ಹೇ.) | 240 |
| 3 | ತೋಟಗಾರಿಗೆ (ಹೇ.) | 160 |
| 4 | ರೇಷ್ಮೆ (ಹೇ.) | - |
| 5 | ಅರಣ್ಯ ಪ್ರದೇಶ (ಹೇ.0 | - |
| 6 | ಪಾಳುಬಿದ್ದ ಭೂಮಿ (ಹೇ.) | - |
| 7 | ಶಾಶ್ವತಹುಲ್ಲುಗಾವಲುಗಳು (ಹೇ.) | - |
| 8 | ಮಣ್ಣಿನ ವಿಧ | ಕಪ್ಪು ಮಣ್ಣು |
| 9 | ಮಣ್ಣು ಆರೋಗ್ಯ ಹೊಂದಿರುವವರ ಸಂಖ್ಯೆ | 25 |
| 10 | ನೀರಿನ ಮೂಲ | - |
| | ನದಿ | - |
| | ತೆರೆದ ಬಾವಿಗಳು | - |
| | ಬೊರೆವೆಲ್ | - |
| | ಕಾಲುವೆಗಳು | 01 |
| | ನೀರಿನ ಟ್ಯಾಂಕ್ | - |
| 11 | ಕೃಷಿಹೊಂಡ | 10 |
| 12 | ಸೂಕ್ಷ್ಮ ನೀರಾವರಿ (ಹೇ.) (ಹನಿ/ಸಿಂಪರಣೆ) | 4 (ಹೇ) |
| 13 | ಜಾನುವಾರುಗಳು | |
| | ಆಕಳು | 40 |
| | ಎಮ್ಮೆ | 20 |
| | ಎತ್ತು | 60 |
| | ಕುರಿ | 400 |
| | ಆಡು | 200 |
| | ಕೋಳಿ | 500 |
| | ಇತರೆ | - |
| 14 | ಸಂಪರ್ಕ (ಬಸ್/ರೈಲ್/ಇತರೆ) | ಬಸ್ |
| 15 | ಕೃಷಿ ಯಾಂತ್ರಿಕತೆ | |
| | ಟ್ರ್ಯಾಕ್ಟರ್ | 16 |
| | ಎತ್ತಿನ ನೇಗಿಲು | 10 |

| | | |
|---|---|---|
| | ರೋಟೋವೇಟರ್ | 01 |
| | ಟಿಲ್ಲರ್ | 15 |
| | ಕೃಷಿ ಭೂಮಿ ಸಮಾನಾಂತರ ಮಾಡುವ ಸಾಧನ | 12 |
| | ಬ್ಲೇಡ್ ಹಾರೋ | 10 |
| | ಕೂರಿಗೆ | 07 |
| | ಸಿಂಪರಣೆ ಸಾಧನ | 50 |
| | ಕೋಯ್ಲು ಯಂತ್ರ | - |
| | ಬಹು ಒಕ್ಕಣೆ ಯಂತ್ರ | - |
| | ಧಾನ್ಯಗಳ ಶ್ರೇಣಿಕರಿಸುವ ಯಂತ್ರ | - |
| | ಮೇವು ಕತ್ತರಿಸುವ ಯಂತ್ರ | - |
| | ಇತರೆ | - |
| | ವ್ಯವಸಾಯಕ್ಕೆ ಸಂಬಂಧಿಸಿದ ಇತರೆ ಘಟಕಗಳು | |
| | ಹೈನುಗಾರಿಕೆ | - |
| | ಕೋಳಿ ಸಾಕಾಣಿಕೆ | 02 |
| | ಅಣಬೆ ಉತ್ಪಾದನೆ | - |
| | ಆಡು ಸಾಕಾಣಿಕೆ | 05 |
| | ಮೀನುಗಾರಿಕೆ | - |
| | ಎರೆಹುಳು ಗೊಬ್ಬರ/ಗೊಬ್ಬರ | - |
| | ಜೇನು ಸಾಕಾಣಿಕೆ | - |
| | ಇತರೆ ಮಾಹಿತಿ | |
| | ಮಿನಿದಾಲ್ ಮಿಲ್ | - |
| | | - |
| | ಹಿಟ್ಟಿನ ಗಿರಣಿ | - |
| | ಮೆಣಸಿನಕಾಯಿ (ಕಾರ ಮಾಡುವ ಸಾಧನ) | - |
| | ಇತರೆ | - |
| | ಹತ್ತಿರದ ಗೋದಾಮು/ಗೋಡೌನ್ಸ್/ಶೀತಲ ಗೃಹಗಳು | 01 |

ಜಕ್ಕಲದಿನ್ನಿ ಗ್ರಾಮದ ಒಟ್ಟು ಜನಸಂಖ್ಯೆ 1972 ಆಗಿದ್ದು, 375 ಕುಟುಂಬಗಳು ಒಳಗೊಂಡಿರುತ್ತದೆ. ಇದರಲ್ಲಿ 971 ಪುರುಷರು ಹಾಗೂ ಮಹಿಳೆಯು 1001 ಇರುತ್ತಾರೆ. ಈ ಹಳ್ಳಿಯಲ್ಲಿ ಎಸ್.ಸಿ. 247 ಹಾಗೂ ಎಸ್.ಟಿ. 384 ಶೇಕಡವಾರು 5.70 ರಷ್ಟು ಬಿ.ಪಿ.ಎಲ್. ಕುಟುಂಬಗಳನ್ನು ಹೊಂದಿದ್ದಾರೆ. ಈ ಪೈಕಿ 25 ರೈತರನ್ನು ಆಯ್ಕೆ ಮಾಡಲಾಗಿದ್ದು ವಿವರಗಳು ಹೀಗಿವೆ.

| ಕ್ರ.ಸಂ. | ಹೆಸರು | ಲಿಂಗ | ವಯಸ್ಸು | ಜಾತಿ | ಶಿಕ್ಷಣ | ಪ್ರದೇಶ (ಎ.) | ನೀರಾವರಿಯ ಮೂಲ |
|---|---|---|---|---|---|---|---|
| 1 | ದೇವಮ್ಮ ಗಂಡ ಮಹಾದೇವಪ್ಪ | ಹೆ | 44 | ST | -- | 2.0 | ನೀರಾವರಿ/ಕೊನೆ ಹಂತ |
| 2 | ನಾಗಪ್ಪ ತಂದೆ ಗುರುಲಿಂಗಪ್ಪ | ಗಂ | 42 | ST | -- | 1.0 | ನೀರಾವರಿ/ಕೊನೆ ಹಂತ |
| 3 | ಈರಪ್ಪ ತಂದೆ ರಂಗಪ್ಪ | ಗಂ | 42 | ST | -- | 2.14 | ನೀರಾವರಿ/ಕೊನೆ ಹಂತ |
| 4 | ಜಯರಾಜ ತಂದೆ ಆದೆಪ್ಪ | ಗಂ | 28 | SC | B.A | 1.0 | ನೀರಾವರಿ/ಕೊನೆ ಹಂತ |
| 5 | ಹನುಮಂತಿ ಗಂಡ ಹನುಮಂತ | ಹೆ | 51 | SC | -- | 1.24 | ಮಳೆಯಾಶ್ರೀತ |

| | | | | | | | |
|---|---|---|---|---|---|---|---|
| 6 | ಮಲ್ಲಿಕಾರ್ಜುನ ತಂದೆ ಭೀಮಪ್ಪ | ಗಂ | 44 | SC | 5 | 2.0 | ಮಳೆಯಾಶ್ರೀತ |
| 7 | ಅಮರೇಶ ತಂದೆ ಶರಣಪ್ಪ ಕೊಟಿ | ಗಂ | 32 | OBC | 7 | 5.0 | ಮಳೆಯಾಶ್ರೀತ |
| 8 | ಚನ್ನಬಸವ ತಂದೆ ಈರಪ್ಪ ಗಡಗಿ | ಗಂ | 28 | OBC | 10 | 2.0 | ಮಳೆಯಾಶ್ರೀತ |
| 9 | ಕಮಪ್ಪ ತಂದೆ ಮಲ್ಲಪ್ಪ | ಗಂ | 30 | OBC | 4 | 2.30 | ನೀರಾವರಿ/ಕೊನೆ ಹಂತ |
| 10 | ಗಂಗಪ್ಪ ತಂದೆ ಶೇಕರಪ್ಪ | ಗಂ | 25 | OBC | 5 | 1.0 | ನೀರಾವರಿ/ಕೊನೆ ಹಂತ |
| 11 | ಶಂಕರಗೌಡ ತಂದೆ ಬಸವಂತಪ್ಪ | ಗಂ | 34 | GM | 8 | 4.0 | ನೀರಾವರಿ/ಕೊನೆ ಹಂತ |
| 12 | ದೇವರಾಜ ತಂದೆ ಬಸವನಗೌಡ | ಗಂ | 30 | GM | 7 | 1.0 | ನೀರಾವರಿ/ಕೊನೆ ಹಂತ |
| 13 | ವಿಶ್ವನಾಥರೆಡ್ಡಿ ತಂದೆ ವೀರನಗೌಡ | ಗಂ | 40 | GM | 5 | 2.05 | ನೀರಾವರಿ/ಕೊನೆ ಹಂತ |
| 14 | ಶರಣಗೌಡ ತಂದೆ ಹರಶ್ಚಂದ್ರಪ್ಪ | ಗಂ | 38 | GM | B.Com | 5.0 | ಮಳೆಯಾಶ್ರೀತ |
| 15 | ರಮೇಶ ತಂದೆ ದುರುಗಪ್ಪ | ಗಂ | 30 | GM | 2 | 2.0 | ಮಳೆಯಾಶ್ರೀತ |
| 16 | ಚನ್ನಬಸಮ್ಮ ಗಂಡ ಹನುಮಂತ | ಹೆ | 28 | GM | -- | 2.0 | ನೀರಾವರಿ/ಕೊನೆ ಹಂತ |
| 17 | ಬಸಮ್ಮ ಗಂಡ ಆದೆಪ್ಪ | ಹೆ | 40 | GM | -- | 1.0 | ಮಳೆಯಾಶ್ರೀತ |
| 18 | ಶಿವರಾಮರೆಡ್ಡಿ ತಂದೆ ಚಂದ್ರಶೇಖರಪ್ಪ | ಗಂ | 44 | GM | 7 | 6.0 | ಮಳೆಯಾಶ್ರೀತ |
| 19 | ಮಲ್ಲಯ್ಯ ತಂದೆ ಮುದುಕಪ್ಪ | ಗಂ | 37 | GM | 5 | 1.20 | ನೀರಾವರಿ/ಕೊನೆ ಹಂತ |
| 20 | ಅಮರೇಶ ತಂದೆ ಬಸವರಾಜ | ಗಂ | 34 | GM | 2 | 3.04 | ಮಳೆಯಾಶ್ರೀತ |
| 21 | ಅಮರೇಶ ತಂದೆ ರಾಚಪ್ಪ | ಗಂ | 32 | GM | -- | 2.11 | ಮಳೆಯಾಶ್ರೀತ |
| 22 | ಸುರೇಶ ತಂದೆ ಮಲ್ಲಪ್ಪ | ಗಂ | 30 | GM | 8 | 2.0 | ನೀರಾವರಿ/ಕೊನೆ ಹಂತ |
| 23 | ಮಲ್ಲಯ್ಯ ತಂದೆ ಕರಿಬಸಪ್ಪ | ಗಂ | 40 | GM | -- | 2.0 | ಮಳೆಯಾಶ್ರೀತ |

| | | | | | | | |
|---|---|---|---|---|---|---|---|
| 24 | ಮಲ್ಲಿಕಾರ್ಜುನ ತಂದೆ ಮಹದೇವಪ್ಪ | ಗಂ | 38 | GM | 7 | 2.0 | ನೀರಾವರಿ/ಕೊನೆ ಹಂತ |
| 25 | ಲಿಂಗಪ್ಪ ತಂದೆ ಶಿವನಪ್ಪ | ಗಂ | 40 | GM | -- | 4.0 | ನೀರಾವರಿ/ಕೊನೆ ಹಂತ |

**ಎಸ್.ಸಿ.-03, ಎಸ್.ಟಿ.-03, ಓ.ಬಿ.ಸಿ.-4, ಸಾಮಾನ್ಯ-15**

**ಜಕ್ಕಲದಿನ್ನಿ ಗ್ರಾಮದ ಸಾಮಾಜಿಕ ವಿವರ:**

- ಎರಡು ಅಂಗನವಾಡಿಗಳು
- ನಾಲ್ಕು ಸ್ವ ಸಹಾಯ ಸಂಘಗಳು
- ಮಹಿಳೆಯರಿಗೆ ಮದುವೆ ವಯಸ್ಸು 18 ವರ್ಷಗಳ ಹಾಗೂ ಪುರುಷರಿಗೆ 21 ವರ್ಷಗಳ ಮೇಲ್ಪಟ್ಟಿದೆ
- ಒಟ್ಟು ಜನಸಂಖ್ಯೆಯ ಶೇಕಡವಾರು 5 ರಷ್ಟು ಸೇವಾ ವಲಯ (Service Sector)
- ಮಡಿವಾಳ ಜಾತಿಯು ಅತಿ ಹೆಚ್ಚು (50%) ನಂತರ ಕುರುಬರು (15%), ಪರಿಶಿಷ್ಟ ಪಂಗಡ (15%), ಪರಿಶಿಷ್ಟ ಜಾತಿ (10%) ಮತ್ತು ಲಿಂಗಾಯುತ (10%)
- ಬಾಲ ಕಾರ್ಮಿಕ ಪದ್ಧತಿ ರದ್ದುಪಡಿಸಲಾಗಿದೆ
- 14 ವರ್ಷ ವಯಸ್ಸಿನ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡಲಾಗಿದೆ
- ಒಂದು ಹಿರಿಯ ಪ್ರಾಥಮಿಕ ಶಾಲೆ ಇದೆ
- ಕೆಲಸಕ್ಕೆ ಇತರೆ ಸ್ಥಳಗಳಿಗೆ ವಲಸೆ ಹೋಗುವ ಸಂಭವವಿಲ್ಲ. ಆದರೆ, ಪಕ್ಕದ ಗ್ರಾಮಗಳಾದ ಅತ್ತನೂರು, ನೀಲಗಲ್, ಗೊಂಡಿಪಲ್ಲಿ, ಜಾಗಟಕಲ್, ಮಡಗಿರಿ ಮತ್ತು ಗೆಜ್ಜೆಬಾವಿ ಸುತ್ತಮುತ್ತಲಿನ ಗ್ರಾಮಗಳಿಂದ ಕೃಷಿ ಮಾಡಲು ಭೂಮಿಯನ್ನು ಬಾಡಿಗೆ ಪಡೆದಿರುತ್ತಾರೆ.

**ಜಕ್ಕಲದಿನ್ನಿ ಗ್ರಾಮದ ಕೃಷಿ ಸನ್ನಿವೇಶ:**

- 10–15 ರೈತರು 20 ಎಕರೆ ಭೂಮಿಯನ್ನು ಹೊಂದಿರುತ್ತಾರೆ ಅದೇರೀತಿಯಾಗಿ ಸಣ್ಣ ಹಾಗೂ ಅತೀ ಸಣ್ಣ ರೈತರು ಭೂಸ್ವಾಧಿನರಾಗಿರುತ್ತಾರೆ.
- ತೋಟಗಾರಿಕೆ ಬೆಳೆಯಾದ ಮೆಣಸಿನಕಾಯಿ ಮುಖ್ಯ ಬೆಳೆಯಾಗಿದೆ.
- ಕೃಷಿ ಬೆಳೆಗಳಾದ ಹತ್ತಿ (40%), ಭತ್ತ (10%), ತೊಗರಿ (5%), ಕಡಲೆ (5%) ಮತ್ತು ಜೋಳ (5%)
- ಒಟ್ಟು ಸಾಗುವಾಳಿ ಪ್ರದೇಶ: 1500–1600 ಇದ್ದು, 106 ಸರ್ವೇ ಸಂಖ್ಯೆಗಳನ್ನು ಹೊಂದಿದೆ
- ಕಾಲುವೆ ನೀರಾವರಿ ಶೇಕಡ 70 ರಷ್ಟು ಇದೆ
- ಕಪ್ಪು ಮಣ್ಣು
- ನೀರಿನಲ್ಲಿ ಅತಿ ಹೆಚ್ಚಿನ ಉಪ್ಪಿನಾಂಶ ಇರುವುದರಿಂದ ಬಾವಿಗಳ ಬಳಕೆ ಸಾಧ್ಯತೆ ಇಲ್ಲ
- ಕಳೆದ ನಾಲ್ಕು ವರ್ಷಗಳಿಂದ ಕಾಲುವೆಗಳ ಮೂಲಕ ನಿಯಮಿತವಾಗಿ ನೀರು ಸರಬರಾಜು ಇಲ್ಲ
- 7 ರಿಂದ 8 ಕೊಳವೆ ಬಾವಿಗಳಿವೆ
- ಸಮುದಾಯ ಟ್ಯಾಂಕಗಳಿಗೆ ಸ್ಥಳವಿಲ್ಲ

**ಪಶುವೈದ್ಯಕೀಯ ಸನ್ನಿವೇಶ:**

- ದನಕರುಗಳಿಗೆ ಮೇಯಿಸಲು ಸ್ಥಳವಿಲ್ಲ
- ಕೆ.ಎಂ.ಎಫ್. ಅಡಿಯಲ್ಲಿ ಒಂದು ಡೈರಿ (ಹಾಲು ಸಂಗ್ರಹ) ಘಟಕವಿದೆ
- ಪಕ್ಕದ ಹಳ್ಳಿಯಾದ ಅತ್ತನೂರಿನಲ್ಲಿ ಪಶುವೈದ್ಯಕೀಯ ಅಸ್ಪತ್ರೆ ಇದೆ
- ಪಶು ಅರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ
- ಹಸಿರೆಲೆ ಗೊಬ್ಬರ ಬೆಳೆಗಳನ್ನು ಬೆಳೆಯುತ್ತಿಲ್ಲ
- 200 ಎಮ್ಮೆಗಳು, 20–30 ಆಕಳು (ದೇಸಿ), 25 ಜೋಡಿ ಎತ್ತುಗಳು, 300–400 ಕುರಿ ಮತ್ತು ಮೇಕೆ, 3–4 ಕೋಳಿಗಳನ್ನು ಹಿತ್ತಲಲ್ಲಿ ಸಾಕುತ್ತಾರೆ.

**ಮಣ್ಣಿನ ಲವಣಾಂಶ:**

- ಮಣ್ಣಿನ ಲವಣಾಂಶ ತೆಗೆದುಹಾಕಲು 10 ಸಮಿಕ್ಷೆ ಸಂಖ್ಯೆಗಳ ಪೈಪಲೈನ್‌ನ್ನು 400 ಎಕರೆಗೆ ಆಳವಡಿಸಲಾಗಿದೆ.
- ಶೇಕಡ 40 ರಷ್ಟು ಕೃಷಿ ಭೂಮಿಯನ್ನು ಮಣ್ಣಿನ ಪರೀಕ್ಷೆಗೆ ಒಳಪಡಿಸಿ ಸಮಗ್ರ ಪೋಷಕಾಂಶ ನಿರ್ವಹಣೆ ಕೈಗೊಳ್ಳಲಾಗಿದೆ
- ಈ ಗ್ರಾಮದಲ್ಲಿ ರಾಯಚೂರು ಕೆ.ವಿ.ಕೆ. ವಿಜ್ಞಾನಿಗಳ ಸಲಹೆಮೇರೆಗೆ ರೈತರು ಹನಿ ನೀರಾವರಿ ಪದ್ಧತಿಯನ್ನು ಆಳವಡಿಸಿಕೊಂಡಿದ್ದಾರೆ.

## ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ವಿವಿಧ ಕಾರ್ಯಕ್ರಮಗಳು ಹಾಗೂ ಅವುಗಳ ಅನುಷ್ಠಾನ

1. ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ವಿವಿಧ ತಂತ್ರಜ್ಞಾನಗಳ ವರ್ಗಾವಣೆ, ಅವುಗಳ ಫಲಿತಾಂಶ, ಆ ಮೂಲಕ ಇಳುವರಿ ಹಾಗೂ ಆದಾಯದ ಹೆಚ್ಚಳ.
2. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯ ದೊರಕಿಸುವಲ್ಲಿ ಮಾಡಿದ ಪ್ರಯತ್ನ, ಆದರ ಪ್ರಗತಿ ಹಾಗೂ ರೈತರ ಆದಾಯದಲ್ಲಾದಂತ ವೃದ್ಧಿ.
3. ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಮಾಡಿರುವ ಪ್ರಯತ್ನ ಹಾಗೂ ಆದರ ಪ್ರಗತಿ.
4. ಕೃಷಿ ಬೆಲೆ ಆಯೋಗದ ಅನುದಾನ ಬಳಸಿ, ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳು. (ಉದಾ: ಎರೆಹುಳು ಗೊಬ್ಬರ, ಮಣ್ಣು ಪರೀಕ್ಷೆ, ರೈತರ ಕಿಟ್, ಇತರೆ) ಈ ಮೂಲಕ ಸಾಧಿಸಿರುವ ರೈತರ ಆದಾಯದ ವೃದ್ಧಿ.
5. ಆಯ್ಕೆಯಾದ ಗ್ರಾಮದ ರೈತರ ಕಲ್ಯಾಣ ವೃದ್ಧಿ (ಉದಾ: ಆರೋಗ್ಯ, ನೈರ್ಮಲ್ಯ, ಕೌಶಲ್ಯಾಭಿವೃದ್ಧಿ, ಇತರೆ) ಇತ್ಯಾದಿಗಳ ಬಗ್ಗೆ ಕೈಗೊಂಡ ಕಾರ್ಯಕ್ರಮ ಮತ್ತು ಫಲಿತಾಂಶ.
6. ರೈತರ ಸಾಮರ್ತ್ಯಾಭಿವೃದ್ಧಿ ಸಕಾರಾತ್ಮಕ ಮನೋಭಾವಕ್ಕೆ ಮಾಡಿರುತ್ತಕ್ಕಂತ ಕಾರ್ಯಕ್ರಮ ಮತ್ತು ಪರಿಣಾಮ.
7. ಯೋಜನೆಗೆ ಪೂರಕವಾದಂತಹ ಇತರೆ ಪ್ರಮುಖ ವಿಚಾರಗಳಲ್ಲಿನ ಪ್ರಗತಿ.

**1. ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ವಿವಿಧ ತಂತ್ರಜ್ಞಾನಗಳ ವರ್ಗಾವಣೆ, ಅವುಗಳ ಫಲಿತಾಂಶ, ಆ ಮೂಲಕ ಇಳುವರಿ ಹಾಗೂ ಆದಾಯದ ಹೆಚ್ಚಳ**

| ಕ್ರ.ಸಂ. | **ಚಟುವಟಿಕೆಗಳು** | **ಪ್ರದೇಶ** (ಎ.) | **ಫಲಾನುಭವಿಗಳು** |
|---|---|---|---|
| **ಕ್ಷೇತ್ರ ಪರಿಶೀಲನೆ** | | | |
| 1 | ಜೋಳದ ವಿವಿಧ ತಳಿಗಳ ಕ್ಷೇತ್ರ ಪರಿಶೀಲನೆ | 5 | 5 |
| **ಮುಂಚೂಣಿ ಪ್ರಾತ್ಯಕ್ಷಿಕೆ** | | | |
| 2 | ಭತ್ತದ ಮುಂಚೂಣಿ ಪ್ರಾತ್ಯಕ್ಷಿಕೆ (2017–18) | 2 | 2 |
| 3 | ಕಡಲೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (2018–19) | 25 | 25 |
| 4 | ನವಣೆಯ ಮುಂಚೂಣಿ ಪ್ರಾತ್ಯಕ್ಷಿಕೆ (2018–19) | 5 | 5 |
| 5 | ತೊಗರಿ ಬೆಳೆಯ ಸಮಗ್ರ ನಿರ್ವಹಣೆ (2018–19) | 100 | 100 |
| **ಕ್ಷೇತ್ರ ಪ್ರಯೋಗಗಳು** | | | |
| 6 | ಮೆಣಸಿನಕಾಯಿಯ ವಿವಿಧ ತಳಿಗಳು (2017–18) | 2 | 2 |
| 7 | ಹತ್ತಿಯ ವಿವಿಧ ತಳಿಗಳು (2017–18) | 2 | 2 |
| 8 | **ಒಟ್ಟು** | **141** | **141** |
| **ಸಮಗ್ರ ಕೃಷಿ ಪದ್ಧತಿ 2017–18** | | | |
| 9 | ಮೇವಿನ ಮಿನಿ ಕಿಟ್‌ಗಳು | 5 | 5 |
| 10 | ಗಿರಿರಾಜ ಪಕ್ಷಿಗಳು | 10 | |
| 11 | ತರಕಾರಿ ಕಿಟ್‌ಗಳು | 5 | |

**ಗ್ರಾಮಗಳಲ್ಲಿ ಕೈಗೊಂಡ ಕ್ಷೇತ್ರಪರಿಶೀಲನೆ ಮತ್ತು ಮುಂಚೂಣಿ ಪ್ರಾತ್ಯಕ್ಷಿಕೆಗಳ ವಿವರ:**

| ಕ್ರ.ಸಂ. | ಬೆಳೆ/ ಉದ್ಯಮ | ಕಂಡುಬಂದ ಸಮಸ್ಯೆ | ಶೀರ್ಷಿಕೆ | ಆಳವಡಿಸಿದ ಶೀರ್ಷಿಕೆ/ ತಳಿ | ತಂತ್ರಜ್ಞಾನದ ಮೂಲ | ಪರಿಕರಗಳು | ಪ್ರಮಾಣ | ದರ | ಪ್ರಯೋಗಗಳ ಸಂಖ್ಯೆ | ಒಟ್ಟು ವೆಚ್ಚ | ಮಾನದಂಡಗಳು | ತಂಡದ ಸದಸ್ಯರು |
|---|---|---|---|---|---|---|---|---|---|---|---|---|
| 1. | ಜೋಳ | ಕಡಿಮೆ ಧಾನ್ಯ ಹಾಗೂ ಮೇವಿನ ಇಳುವರಿ | ಜೋಳದ ವಿವಿಧ ತಳಿಗಳ ಕ್ಷೇತ್ರ ಪರಿಶೀಲನೆ | $T_1$: M 35-1 | UASR | ಬೀಜ | 3 ಕೆ.ಜಿ. | 135 | 5 | 2685 | • ಸಸ್ಯದ ಎತ್ತರ<br>• 100 ಬೀಜದ ತೂಕ<br>• ಧಾನ್ಯ ಮತ್ತು ಮೇವಿನ ಇಳುವರಿ ಮತ್ತು ಗುಣಮಟ್ಟ | ವಿಜ್ಞಾನಿ (ಬೇಸಾಯಶಾಸ್ತ್ರ ಮತ್ತು ಕೃಷಿ ಕೀಟಶಾಸ್ತ್ರ) |
| | | | | $T_2$ : SPV-2217 | UASD | ಬೀಜ | 3 ಕೆ.ಜಿ. | 135 | | | | |
| | | | | $T_3$ : GS-23 | UASR | ಬೀಜ | 3 ಕೆ.ಜಿ. | 135 | | | | |
| | | | | $T_4$: Phule Yeshodha | MPKV, Rahuri | ಬೀಜ | 3 ಕೆ.ಜಿ. | 132 | | | | |
| | ಭತ್ತ | • ಕಾಲುವೆ ಕೊನೆ ಭಾಗದ ರೈತರಿಗೆ ನೀರಿನ ಕೊರತೆ<br>• ಸಮಯಕ್ಕೆ ಸರಿಯಾಗಿ ನೀರಿನ ಲಭ್ಯತೆ ಇಲ್ಲ (100%)<br>• ಬೀಜೋಪಚಾರ ಮಾಡದೆ ಇರುವುದು (90%)<br>• ಕಳೆ ನಾಶಕಗಳನ್ನು ಸರಿಯಾದ ಪ್ರಮಾಣದಲ್ಲಿ<br>• ಮತ್ತು ಅವಧಿಯಲ್ಲಿ ಬಳಸದೆ ಇರುವುದು (80%)<br>• ಅತಿಯಾದ ಕೀಟನಾಶಕಗಳ ಬಳಕೆ (30%)<br>• ಕಂದು ಜಿಗಿ ಹುಳುವಿನ ಬಾಧೆ (100%) | ಕೂರಿಗೆ ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ | ಸೋನಾಮಸೂರಿ | ಕೃ.ವಿ.ವಿ. ರಾಯಚೂರು | ಅಝೊಸ್ಪಿರಲಿವ್ ಪಿ.ಎಸ್.ಬಿ.<br>ಎಲ್. ಸಿ.ಸಿ.<br>ಮಣ್ಣು ಪರೀಕ್ಷೆ | 200 ಗ್ರಾಂ.<br>200 ಗ್ರಾಂ.<br>1<br>2 | 15<br>15<br>100<br>400 | 5 | 5900 | ಬೆಳವಣಿಗೆ ಇಳುವರಿ<br>ಮಣ್ಣು ಪರೀಕ್ಷೆ<br>ಆರ್ಥಿಕತೆ | ವಿಜ್ಞಾನಿಗಳು :<br>ಮಣ್ಣು ವಿಜ್ಞಾನ, ಬೇಸಾಯ ಶಾಸ್ತ್ರ |

## ಮಣ್ಣಿನ ಗುಣಲಕ್ಷಣಗಳು ಮತ್ತು ಫಲವತ್ತತೆ

| ರೈತರ ಹೆಸರು | pH | | EC (dS/m) | | N (kg/ha) | | $P_2O_5$ (kg/ha) | | $K_2O$ (kg/ha) | |
|---|---|---|---|---|---|---|---|---|---|---|
| | ಆರಂಭಿಕ | ಕೊನೆ ಹಂತ | ಆರಂಭಿಕ | ಕೊನೆ ಹಂತ | ಆರಂಭಿಕ | ಕೊನೆ ಹಂತ | ಆರಂಭಿಕ | ಕೊನೆ ಹಂತ | ಆರಂಭಿಕ | ಕೊನೆ ಹಂತ |
| ಶ್ರೀ. ಶರಣೇಗೌಡ | 7.85 | 7.80 | 3.94 | 4.00 | 188 | 199 | 37.5 | 33.2 | 342 | 355 |
| ಕರಿವಪ್ಪ | 7.91 | 8.03 | 4.37 | 4.44 | 201 | 217 | 31.8 | 28.0 | 355 | 468 |
| ಯಲ್ಲಪ್ಪ | 7.72 | 7.77 | 5.09 | 5.12 | 178 | 202 | 41.5 | 33.8 | 426 | 437 |
| ಬಸವನಗೌಡ | 7.63 | 7.71 | 4.05 | 4.11 | 185 | 208 | 33.9 | 28.5 | 347 | 358 |
| ಶಿವಶರಣ | 8.01 | 8.07 | 5.61 | 5.67 | 178 | 197 | 44.3 | 32.9 | 412 | 424 |

## ಮೂಂಚೂಣಿ ಪ್ರಾತ್ಯಕ್ಷಿಕೆಯ ಫಲಿತಾಂಶ

| ವಿವರ | ಪ್ರಾತ್ಯಕ್ಷಿಕೆಯ ಆರ್ಥಿಕತೆ | | | | | | |
|---|---|---|---|---|---|---|---|
| | ತೆನೆಗಳ ಸಂಖ್ಯೆ | ಒಟ್ಟು ಇಳುವರಿ (ಕ್ವಿಂ./ಹೇ.) | ಶೇಕಡವಾರು ಹೆಚ್ಚಳ | ಒಟ್ಟು ವೆಚ್ಚ (ರೂ./ಹೇ.) | ಒಟ್ಟು ಲಾಭ (ರೂ./ಹೇ.) | ನಿವ್ವಳ ಲಾಭ (ರೂ.ಹೇ.) | ಆದಾಯ:ಖರ್ಚು |
| ರೈತ ಪದ್ಧತಿ | 11 | 46.10 | 18.40 | 46500 | 95611 | 49111 | 2.06 |
| ಪ್ರಾತ್ಯಕ್ಷಿಕೆ | 16 | 54.58 | | 47800 | 113199 | 65399 | 2.37 |

## ರಾಷ್ಟ್ರೀಯ ಆಹಾರ ಭದ್ರತಾ ಸಂಸ್ಥೆ (NFSM) ವತಿಯಿಂದ ಕೈಗೊಂಡ ಮಂಚೂಣಿ ಪ್ರಾತ್ಯಕ್ಷಿಕೆಗಳ ವಿವರ (2018–19)

| ಕ್ರ.ಸಂ. | ಬೆಳೆ | ಇಳುವರಿ | | ನಿವ್ವಳ ಲಾಭ | | ಆದಾಯ:ಖರ್ಚು |
|---|---|---|---|---|---|---|
| | | ಪ್ರಾತ್ಯಕ್ಷಿಕೆ | ರೈತರ ಪದ್ಧತಿ | ಪ್ರಾತ್ಯಕ್ಷಿಕೆ | ರೈತರ ಪದ್ಧತಿ | |
| 1 | ತೊಗರಿ | 5.69 | 2.475 | 8738 | 16400 | 1.33 |
| 2 | ಕಡಲೆ | 11.46 | 8.33 | 29824 | 10744 | 2.37 |

**2. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವ ದೊರಕಿಸುವಲ್ಲಿ ಮಾಡಿದ ಪ್ರಯತ್ನ ಆದ ಪ್ರಗತಿ ಹಾಗೂ ರೈತರ ಆದಾಯದಲ್ಲಾದಂತ ವೃದ್ಧಿ:**

| ಕ್ರ. ಸಂ. | ಚಟುವಟಿಕೆಗಳು | ಅನುಮೋದನೆಯಾದ ಅನುದಾನ | ಫಲಾನುಭವಿಗಳು | ಆದಾಯ |
|---|---|---|---|---|
| 1. | ರಾಯಚೂರು ಜಿಲ್ಲಾ ಪಂಚಾಯಿತಿ ಕಡೆಯಿಂದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ (2018–19) | ರೂ. 3,64,00,000 | ಜಕ್ಕಲದಿನ್ನಿಯ ಎಲ್ಲಾ ಗ್ರಾಮಸ್ಥರಿಗೆ | – |
| 2. | ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡ (ಕೃಷಿ ಇಲಾಖೆ) | ರೂ. 12,00,000 (ಪ್ರತಿಯೊಬ್ಬ ರೈತನಿಗೆ ರೂ. 1,20,000) | 10 | ನೀರಿನ ಅಭಾವ ಇರುವ ಸಮಯದಲ್ಲಿ ಕೃಷಿ ಹೊಂಡದಿಂದ ಕೃಷಿ ಚಟುವಟಿಕೆಗಳಿಗೆ ನೀರಿನ ಉಪಯೋಗವಾಗುತ್ತದೆ. ಸಮಯಕ್ಕೆ ಸರಿಯಾಗಿ ನೀರು ದೊರೆಯುವುದರಿಂದ ಉತ್ತಮ ಬೆಳೆಯನ್ನು ಬೆಳೆಯಲು ಅನುಕೂಲವಾಗುತ್ತದೆ ಹಾಗೂ ಇದರಿಂದ ಕೃಷಿಕರ ಆದಾಯ ಹೆಚ್ಚಾಗುತ್ತದೆ |
| 3. | ಗಿರಿರಾಜ ಕೋಳಿಗಳು (ಪ್ರತಿ ರೈತರಿಗೆ 10 ಕೋಳಿ) ಪಶುವೈದ್ಯಕೀಯ ಇಲಾಖಾ ವತಿಯಿಂದ (2018–19) ಇದರಿಂದಾದ ಲಾಭಗಳು: | ರೂ. 29,600 ಜಿಲ್ಲಾ ಪಂಚಾಯತ್ ಸದಸ್ಯತ್ವದಡಿಯಲ್ಲಿ 370 ಗಿರಿರಾಜ ಕೋಳಿಗಳನ್ನು ವಿತರಿಸಲಾಗಿದೆ | 37 | • ಈ ಮೊದಲು ಜವಾರಿ ಕೋಳಿಗಳನ್ನು ಸಾಕುತ್ತಿದ್ದರು. ಒಂದು ಜವಾರಿ ಕೋಳಿಯಿಂದ ನಾಲ್ಕು ತಿಂಗಳಿಗೆ ಕೇವಲ ರೂ. 400 ಗಳ ಲಾಭವಾಗುತ್ತಿತ್ತು,<br>• ಒಂದು ಗಿರಿರಾಜ ಕೋಳಿಯನ್ನು ಸಾಕುವುದರಿಂದ ನಾಲ್ಕು ತಿಂಗಳಿಗೆ ರೂ. 800 ಗಳ ಲಾಭವಾಗುತ್ತಿದೆ. 10 ಗಿರಿರಾಜ ಕೋಳಿಗಳಿಗೆ ರೂ. 8000 ಲಾಭವಾಗುತ್ತದೆ |

| | | | | |
|---|---|---|---|---|
| | | | | • ಗಿರಿರಾಜ ಕೋಳಿಗಳ ಮಾಂಸದ ತೂಕ ಹೆಚ್ಚಿರುತ್ತದೆ. (1 ಕೆ.ಜಿ. ಮಾಂಸದ ಬೆಲೆ ರೂ.250) |
| 4. | ರಾಷ್ಟ್ರೀಯ ಬೀಜ ಸಂಸ್ಥೆ ವತಿಯಿಂದ ತರಕಾರಿ ಬೀಜಗಳ ಕಿಟ್ ವಿತರಣೆ (2018–19) | ರೂ. 25,000 | 50 | • ರೈತರಿಗೆ ತರಕಾರಿ ಬೀಜಗಳನ್ನು ವಿತರಿಸಿದ್ದರಿಂದ ದಿನನಿತ್ಯದಲ್ಲಿ ಮನೆ ಬಳಕೆಗೆ ಬಳಸುವ ತರಕಾರಿಗಳ ಬೆಳೆಯಲಾಯಿತು.<br>• ಇದರಿಂದ ಮಾರುಕಟ್ಟೆಯಿಂದ ಖರೀದಿ ಮಾಡುವ ತರಕಾರಿ ಖರ್ಚು ಉಳಿತಾಯವಾಯಿತು.<br>• ಇದರಿಂದ ಪ್ರತಿ ಕುಟುಂಬದ ಒಂದು ವಾರದ ಉಳಿತಾಯ ರೂ.200 |
| 5. | ಕೃಷಿ ಇಲಾಖೆ ವತಿಯಿಂದ ತೊಗರಿ ಬೀಜಗಳ ವಿತರಣೆ (2018–19) | ರೂ. 20,000 | 20 | • ಕೃಷಿ ಇಲಾಖೆಯಿಂದ ತೊಗರಿ (TS-3R) ಬೀಜವನ್ನು ವಿತರಿಸುವುದರಿಂದ ಬೀಜದ ಖರ್ಚು ಉಳಿತಾಯವಾಗಿರುತ್ತದೆ<br>• ಪ್ರತಿ ಎಕರೆಗೆ 100 ಕೆ.ಜಿಯಷ್ಟು ಹೆಚ್ಚಿನ ಇಳುವರಿ ಪಡೆದಿದ್ದು<br>• ಪ್ರತಿ ಎಕರೆಗೆ ರೂ. 6000 ಹೆಚ್ಚಿನ ಆದಾಯ ಪಡೆದಿಕೊಂಡಿರುತ್ತಾರೆ |
| 6. | ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಲಾಭ ಪಡೆಯಲು 25 ಜನ | – | 25 | ಅಗ್ರಿ ಪೋರ್ಟಲ್ ಸದಸ್ಯತ್ವದಿಂದ ಕೃಷಿ |

| | | | | |
|---|---|---|---|---|
| | ರೈತರನ್ನು "ಅಗ್ರೀ-ಪೋರ್ಟಲ್" ಗೆ ರೈತ ಸಂಪರ್ಕ ಕೇಂದ್ರದಲ್ಲಿ ನೋಂದಾಯಿಸಲಾಗಿದೆ | | | ಚಟುವಟಿಕೆಗಳಿ ಪೂರಕವಾಗುವಂತೆ ನೂತನ ತಂತ್ರಜ್ಞಾನಗಳ ಮಾಹಿತಿ ಒದಗಿಸಲಾಗುತ್ತದೆ |
| 7. | ಅರಣ್ಯ ಇಲಾಖೆಯಿಂದ ಸಸಿಗಳ ವಿತರಣೆ (2017–18) | ನುಗ್ಗೆ–400<br>ಹೆಬ್ಬೇವು–600<br>ತೇಗ–300<br>ಬೇವು–200<br>ಕಾಳಿಪತಿ–200<br>ನಿಂಬೆ–150<br>ಜಾಮುನು–150 | 100 | ಸಸಿನೆಡುವಿಕೆಯು ಕೃಷಿ ಅರಣ್ಯಕ್ಕೆ ಪೂರಕವಾಗಿದ್ದು ನುಗ್ಗೆ ಬೆಳೆಯು ಕೋಯ್ಲು ಪ್ರಾರಂಭವಾಗಿದೆ. ಅಲ್ಲದೆ, ಇತರೆ ಗಿಡ–ಮರಗಳು ಕುರಿ ಮತ್ತು ಮೇಕೆಗಳಿಗೆ ಮೇವಾಗಿ ಬಳಸಲಾಗುತ್ತದೆ |
| 8. | ಪಶುವೈದ್ಯಕೀಯ ಮತ್ತು ಪಶುಸಂಗೋಪನೆ ಇಲಾಖೆಯಿಂದ ಕೆಂಗೂರಿ ಟಗರು ಸಾಕಾಣಿಕೆ ಮಾಡುವವರಿಗೆ ಪ್ರೋತ್ಸಾಹ ಧನ ನೀಡಲಾಗಿದೆ | ಪ್ರತಿ ರೈತರಿಗೆ ರೂ. 3,000 ಗಳನ್ನು ಒಟ್ಟು ರೂ. 15,000 5 ಕುರಿಗಳಿಗೆ ನೀಡಲಾಗಿದೆ | 5 | ಪಶುವೈದ್ಯಕೀಯ ಮತ್ತು ಪಶು ಸಂಗೋಪನೆ ಇಲಾಖೆಯಿಂದ ದೊರೆತ ಸಹಾಯ ಧನದಿಂದ ಟಗರುಗಳ ಬೆಳೆವಣಿಗೆ ಮತ್ತು ಟಗರು ಕೊಬ್ಬಿಸುವುಕೆ ಚೆನ್ನಾಗಿ ಕಂಡುಬಂದಿದೆ |
| 9. | ಪಶುವೈದ್ಯಕೀಯ ಮತ್ತು ಪಶುಸಂಗೋಪನೆ ಇಲಾಖೆಯಿಂದ ಮೇವಿನ ಬ್ಯಾಂಕ್ ಸ್ಥಾಪನೆಗಾಗಿ ಮೇವಿನ ಬೀಜಗಳ ಕಿಟ್ ನೀಡಲಾಗಿದೆ (2017–18) | ಜೋಳದ ಬಹು ವಾರ್ಷಿಕ ಬಹು ಕಟಾವಿನ ಮೇವು 5 ಕೆ.ಜಿ. | 5 | ಮೇವಿನ ವೆಚ್ಚ ಕಡಿಮೆಯಾಗಿದ್ದು ಪಶುಗಳಿಗೆ ಸಮತೋಲನ ಆಹಾರ ಪೂರೈಕೆಗೆ ಸಹಕಾರಿಯಾಗಿದೆ |
| 10. | ಪಶುವೈದ್ಯಕೀಯ ಮತ್ತು ಪಶುಸಂಗೋಪನೆ ಇಲಾಖೆಯಿಂದ ಜನ ಸುರಕ್ಷ ಯೋಜನೆಯಡಿಯಲ್ಲಿ ಪರಿಹಾರದ ವಿತರಣೆ (2018–19) | ರೂ.20,000 | 4 | ಆಕಸ್ಮಿಕ ಮರಣ ಹೊಂದಿದ ಪ್ರಾಣಿಗಳಿಗೆ ವಿಮೆಯ ಸೌಲಭ್ಯ |
| 11. | ಪಶುವೈದ್ಯಕೀಯ ಮತ್ತು ಪಶುಸಂಗೋಪನೆ ಇಲಾಖೆಯಿಂದ ಕುರಿ ಮತ್ತು ಮೇಕೆಗಳಿಗೆ ಜಂತುನಾಶಕ ಔಷಧಿ ವಿತರಿಸಲಾಗಿದೆ (2018–19) | – | 50 | ಜಂತು ಹುಳುಗಳ ಬಾಧೆಯಿಂದ ರಕ್ಷಿಸಿ ಹಸುಗಳಲ್ಲಿ ಹಾಲಿನ ಉತ್ಪಾದನೆ ಮತ್ತು ಕುರಿ ಮೇಕೆಗಳಲ್ಲಿ ದೇಹ ತೂಕದಲ್ಲಿ ಉತ್ಪಾದನೆ ಹೆಚ್ಚಳ ಕಂಡುಬಂದಿತು. |

| | | | | |
|---|---|---|---|---|
| 12. | ಪಶುವೈದ್ಯಕೀಯ ಮತ್ತು ಪಶುಸಂಗೋಪನೆ ಇಲಾಖೆಯಿಂದ 25 ಜನ ರೈತರು ಪಶುಭಾಗ್ಯ ಯೋಜನೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ (2018–19) | – | 25 | – |

## 3. ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಮಾಡಿರುವ ಪ್ರಯತ್ನ ಹಾಗೂ ಆದ ಪ್ರಗತಿ

| ಸಮಗ್ರ ಕೃಷಿ ಪದ್ಧತಿ ಆಳವಡಿಸಿಕೊಳ್ಳುವ ಮೊದಲು | ಸಮಗ್ರ ಕೃಷಿ ಪದ್ಧತಿ ಆಳವಡಿಸಿಕೊಳ್ಳುವ ನಂತರ |
|---|---|
| **ಬೆಳೆಯ ವಿವರ:**<br>ಹತ್ತಿ/ಮೆಣಸಿನಕಾಯಿ (ಏಕಬೆಳೆ ಪದ್ಧತಿ) | **ಬೆಳೆಯ ವಿವರ:**<br>ಜೋಳ/ಕಡಲೆ/ತೊಗರಿ ಜೊತೆಗೆ ಹತ್ತಿ ಮತ್ತು ಮೆಣಸಿನಕಾಯಿ |
| **ಜಾನುವಾರುಗಳ ಘಟಕಗಳು:**<br>ಸ್ಥಳೀಯ/ದೇಸಿ ಹಿತ್ತಲಲ್ಲಿ ಕೋಳಿ ಸಾಕಾಣಿಕೆ | **ತೋಟಗಾರಿಕೆ ಬೆಳೆಯ ವಿವರ:** ಮೆಣಸಿನಕಾಯಿ/ಟೊಮ್ಯಾಟೋ/ಬದನೆ ಮತ್ತು ಪೋಷಣಾ ಕೈತೋಟ |
| | **ಜಾನುವಾರು ಘಟಕಗಳು:**<br>• ಹಿತ್ತಲಲ್ಲಿ ಗಿರಿರಾಜ ಕೋಳಿಗಳನ್ನು ಸಾಕುವುದು<br>• ಕೆಂಗ್ಯೂರಿ ರ್‍ಯಾಮ್ ಲ್ಯಾಂಬ್ ಫ್ಯಾಟನಿಂಗ್<br>• ಮೇಕೆ ತಳಿ ಘಟಕಗಳು |
| | **ಮೇವು ಬ್ಯಾಂಕ್ ಘಟಕಗಳು:**<br>• ಜೋಳದ ಬಹುಕಟಾವಿನ ಮೇವು (CoFS-29)<br>• ದ್ವಿದಳ ಧಾನ್ಯದ ಮೇವಿನ ಬೆಳೆಗಳು: ಬೇಲಿಮೆಂತ್ಯ/ಕುದುರೆ ಮೆಂತ್ಯೆ<br>• ಮೇವಿನ ಮರಗಳು: ಚೊಗಚೆ (ಗೊಬ್ಬರದ ಗಿಡ) |
| | **ಅರಣ್ಯ ಘಟಕ:** ಅರಣ್ಯ ಮರಗಳನ್ನು ಬೆಳೆಸುವುದು |

## 4. ಕೃಷಿ ಬೆಲೆ ಆಯೋಗದ ಅನುದಾನ ಬಳಸಿ, ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳು (ಉದಾ: ಎರೆಹುಳು ಗೊಬ್ಬರ, ಮಣ್ಣು ಪರೀಕ್ಷೆ, ರೈತರ ಕಿಟ್, ಇತರೆ)

| ಕ್ರ.ಸಂ. | ಚಟುವಟಿಕೆಗಳು | ಸಂಖ್ಯೆ | ಫಲಾನುಭವಿಗಳು |
|---|---|---|---|
| 1. | NBSS & LUP ಕಡೆಯಿಂದ ಮಣ್ಣು ಪರೀಕ್ಷೆ ಮಾಡಿಸಲಾಗಿದೆ | 01 | 25 |
| 2. | ದೂರ ಶಿಕ್ಷಣಕ್ಕೆ ಪ್ರವೇಶ ಮಾಡಿಸಲಾಗಿದೆ | 06 | 06 |
| 3. | ಎರೆಹುಳು ಗೊಬ್ಬರ ತೊಟ್ಟಿ ನಿರ್ಮಾಣ | 05 | 05 |
| 4. | ಮೇವು ಬ್ಯಾಂಕ್ ಸ್ಥಾಪನೆ | 05 | 05 |
| 5. | ಕಡಲೆಯ ಮುಂಚೂಣಿ ಪ್ರಾತ್ಯಕ್ಷಿಕೆ | 25 | 25 |
| 6. | ಸುರಕ್ಷ ಕಿಟ್ | ವಿತರಣೆ ಮಾಡಲಾಗುವುದು | 100 |

### 1. ಆಯ್ದ 25 ಜನ ರೈತರಿಗೆ ಮಣ್ಣು ಆರೋಗ್ಯ ಚೀಟಿ ವಿರತಣೆ ಮಾಡಲಾಗಿದೆ:

| ಕ್ರ.ಸಂ. | ಹೆಸರು | ಸರ್ವೆ ನಂ. | pH | EC (dSm$^{-1}$) | N | $P_2 05$ | $K_2 0$ | Zn | Fe | Mn | Cu |
|---|---|---|---|---|---|---|---|---|---|---|---|
| 1 | ನಾಗಪ್ಪ ತಂದೆ ಗುರುಲಿಂಗಪ್ಪ | 19 | 8.22 | 0.62 | 128 | 44 | 350 | 0.99 | 7.34 | 20.51 | 3.47 |
| 2 | ಹನುಮಂತಿ ಗಂಡ ಹನುಮಂತ | 69 | 7.90 | 0.32 | 156 | 48 | 344 | 0.73 | 6.39 | 17.41 | 2.60 |
| 3 | ಕಮಪ್ಪ ತಂದೆ ಮಲ್ಲಪ್ಪ | 24 | 7.41 | 0.45 | 144 | 58 | 381 | 0.45 | 6.64 | 17.46 | 2.60 |
| 4 | ಅಮರೇಶ ತಂದೆ ಬಸವರಾಜ | 447 | 8.19 | 0.23 | 127 | 62 | 375 | 0.76 | 11.40 | 16.11 | 3.69 |
| 5 | ಅಮರೇಶ ತಂದೆ ಶರಣಪ್ಪ ಕೊಟಿ | 22 | 7.42 | 0.43 | 106 | 60 | 366 | 0.79 | 11.00 | 17.90 | 3.28 |
| 6 | ಶಂಕರಗೌಡ ತಂದೆ ಬಸವಂತಪ್ಪ | 67 | 8.07 | 0.56 | 158 | 71 | 385 | 0.99 | 10.00 | 18.03 | 2.88 |
| 7 | ರಮೇಶ ತಂದೆ ದುರುಗಪ್ಪ | 30 | 7.44 | 0.72 | 168 | 83 | 403 | 0.65 | 7.56 | 17.93 | 2.49 |
| 8 | ಬಸಮ್ಮ ಗಂಡ ಆದೆಪ್ಪ | 51 | 7.80 | 0.56 | 175 | 67 | 490 | 0.65 | 13.66 | 16.82 | 3.80 |
| 9 | ಲಿಂಗಪ್ಪ ತಂದೆ ಶಿವನಪ್ಪ | 48 | 8.38 | 0.78 | 181 | 61 | 344 | 0.90 | 6.24 | 18.53 | 2.72 |
| 10 | ದೇವಮ್ಮ ಗಂಡ ಮಹಾದೇವಪ್ಪ | 37 | 7.39 | 0.42 | 160 | 44 | 375 | 0.64 | 6.69 | 17.20 | 2.46 |
| 11 | ವಿಶ್ವನಾಥರೆಡ್ಡಿ ತಂದೆ ವೀರನಗೌಡ | 23 | 7.80 | 0.79 | 176 | 38 | 341 | 1.19 | 10.55 | 18.98 | 3.76 |
| 12 | ಸುರೇಶ ತಂದೆ ಮಲ್ಲಪ್ಪ | 198 | 7.77 | 0.36 | 144 | 41 | 388 | 0.87 | 9.01 | 12.97 | 3.57 |
| 13 | ಅಮರೇಶ ತಂದೆ ರಾಚಪ್ಪ | 100 | 7.74 | 0.41 | 132 | 58 | 355 | 0.65 | 11.95 | 17.46 | 3.44 |
| 14 | ಮಲ್ಲಯ್ಯ ತಂದೆ ಮುದುಕಪ್ಪ | 35 | 7.93 | 0.70 | 165 | 48 | 363 | 0.85 | 11.79 | 18.21 | 3.65 |
| 15 | ಜಯರಾಜ ತಂದೆ ಆದೆಪ್ಪ | 1 | 8.00 | 0.80 | 180 | 73 | 360 | 1.38 | 7.65 | 19.42 | 2.86 |
| 16 | ಶರಣಗೌಡ ತಂದೆ ಹರಶ್ಚಂದ್ರಪ್ಪ | 18 | 7.92 | 0.33 | 156 | 55 | 371 | 0.45 | 5.57 | 17.51 | 2.29 |
| 17 | ದೇವರಾಜ ತಂದೆ ಬಸವನಗೌಡ | 94 | 7.79 | 0.54 | 170 | 44 | 344 | 0.97 | 14.09 | 19.72 | 4.60 |
| 18 | ಚನ್ನಬಸವ ತಂದೆ ಈರಪ್ಪ ಗಡಗಿ | 60 | 7.35 | 0.49 | 156 | 50 | 374 | 0.87 | 8.86 | 17.88 | 3.24 |
| 19 | ಮಲ್ಲಿಕಾರ್ಜುನ ತಂದೆ ಮಹದೇವಪ್ಪ | 41 | 8.19 | 0.53 | 150 | 38 | 313 | 1.11 | 16.16 | 16.16 | 4.63 |
| 20 | ಮಲ್ಲಿಕಾರ್ಜುನ ತಂದೆ ಭೀಮಪ್ಪ | 196 | 7.56 | 0.62 | 144 | 48 | 381 | 1.23 | 8.42 | 19.31 | 3.49 |
| 21 | ಗಂಗಪ್ಪ ತಂದೆ ಶೇಕರಪ್ಪ | 198 | 8.34 | 0.52 | 151 | 61 | 370 | 0.34 | 6.31 | 16.56 | 2.12 |
| 22 | ಮಲ್ಲಯ್ಯ ತಂದೆ ಕರಿಬಸಪ್ಪ | 26 | 8.16 | 0.55 | 175 | 68 | 378 | 0.50 | 4.67 | 16.15 | 2.42 |
| 23 | ಚನ್ನಬಸಮ್ಮ ಗಂಡ ಹನುಮಂತ | 2 | 7.89 | 0.79 | 188 | 72 | 401 | 0.63 | 5.77 | 20.22 | 2.37 |
| 24 | ಈರಪ್ಪ ತಂದೆ ರಂಗಪ್ಪ | 23 | 7.96 | 0.63 | 198 | 44 | 413 | 1.04 | 15.71 | 17.00 | 4.00 |
| 25 | ಶಿವರಾಮರೆಡ್ಡಿ ತಂದೆ ಚಂದ್ರಶೇಖರಪ್ಪ | 13 | 7.67 | 0.56 | 132 | 49 | 416 | 0.99 | 7.86 | 18.28 | 3.21 |

ವಿಶ್ವ ಮಣ್ಣು ಆರೋಗ್ಯ ದಿನಾಚರಣೆಯಂದು ಮಣ್ಣು ಆರೋಗ್ಯ ಚೀಟಿ ವಿತರಿಸಲಾಗಿದ್ದು, ಅದರಲ್ಲಿ ನಮೂದಿಸಿದ ಪೋಷಕಾಂಶಗಳ ಲಭ್ಯತೆ ಮತ್ತು ಕೊರತೆ ಅನುಗುಣವಾಗಿ ಬೆಳೆಗಳ ಆಯ್ಕೆ ಮತ್ತು ಶಿಫಾರಸ್ಸು ಮಾಡಿದ ಪೋಷಕಾಂಶಗಳ ಪೂರೈಕೆ ಕುರಿತು ಅರಿವು ಮೂಡಿಸಲಾಯಿತು.

## 2. ದೂರ ಶಿಕ್ಷಣಕ್ಕೆ ಪ್ರವೇಶ ಮಾಡಿಸಿದ ವಿದ್ಯಾರ್ಥಿಗಳ ವಿವರ:

ಆರ್ಥಿಕ ಕೊರತೆಯಿಂದ ಗ್ರಾಮದಲ್ಲಿರುವ ಯುವಕರು ವಿದ್ಯಾಭ್ಯಾಸವನ್ನು ಮುಂದುವರೆಸಲು ಸಾಧ್ಯವಾಗದೆ, ಮೂಲ ಉದ್ಯಮೆಯಾದ ಕೃಷಿಯನ್ನು ತೊರೆದು ಜೀವನೋಪಾಯಕ್ಕೆ ಬೆಂಗಳೂರು, ಪುಣೆ, ಬಾಂಬೆ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದರು. ಕೃಷಿಯಲ್ಲಿನ ಸಾಧ್ಯತೆ ಹಾಗೂ ಕೃಷಿ ಸಂಬಂಧಿತ ಉದ್ಯಮೆಗಳಿಂದ ಆರ್ಥಿ ಸುಸ್ಥಿರತೆ ಕೈಗೊಳ್ಳಬಹುದಾಗಿದೆ ಎಂಬುದನ್ನು ಅರಿವು ಮೂಡಿಸಿ ಅದನ್ನು ಖಾತ್ರಿಪಡಿಸಲು ಗ್ರಾಮದಲ್ಲಿ ಈ ಕೆಳಗೆ ಆಯ್ದ ಯುವಕರನ್ನು ಕೃಷಿ ಡಿಪ್ಲೊಮೊ ಶಿಕ್ಷಣದ ವ್ಯವಸ್ಥೆ ಮಾಡಿಸಲಾಯಿತು.

| ಕ್ರ. ಸಂ. | ವಿದ್ಯಾರ್ಥಿಯ ಹೆಸರು | ಕೋರ್ಸಿನ ಹೆಸರು | ವಯಸ್ಸು | ಶಿಕ್ಷಣ | ಜಾತಿ | ಅರ್ಜಿಯ ಶುಲ್ಕ | ನೋಂದಣಿ ಶುಲ್ಕ |
|---|---|---|---|---|---|---|---|
| 1 | ಚಂದ್ರಕಾಂತ ತಂ: ಲಕ್ಷ್ಮಣ | ಸಮಗ್ರ ಕೃಷಿ ಪದ್ಧತಿ (12 ತಿಂಗಳು) | 20 | ಪಿ.ಯು.ಸಿ. | 2ಎ | ರೂ.50 | ರೂ.1500 |
| 2 | ಚಂದಣ್ಣ ತಂ: ಶರಣಪ್ಪಕೋಟೆ | ಸಮಗ್ರ ಕೃಷಿ ಪದ್ಧತಿ (12 ತಿಂಗಳು) | 26 | ಬಿ.ಕಾಂ. | 2ಎ | ರೂ.50 | ರೂ.1500 |
| 3 | ವೀರುಪಾಕ್ಷಿ ತಂ: ದುರುಗಪ್ಪ | ಸಮಗ್ರ ಕೃಷಿ ಪದ್ಧತಿ (12 ತಿಂಗಳು) | 25 | ಬಿ.ಎ. & ಬಿ.ಎಡ್. | 2ಎ | ರೂ.50 | ರೂ.1500 |
| 4 | ಶಿವಪ್ಪ ತಂ: ಆದೆಪ್ಪ | ಸಮಗ್ರ ಕೃಷಿ ಪದ್ಧತಿ (12 ತಿಂಗಳು) | 29 | ಬಿ.ಎ. | 2ಎ | ರೂ.50 | ರೂ.1500 |
| 5 | ವೆಂಕಟೇಶ ತಂ: ಈರಪ್ಪ | ಸಮಗ್ರ ಕೃಷಿ ಪದ್ಧತಿ (12 ತಿಂಗಳು) | 24 | ಬಿ.ಎ. | ಎಸ್.ಟಿ | ರೂ.50 | – |
| 6 | ಮಹೇಶ ತಂ: ಮಹದೇವಪ್ಪ | ಸಮಗ್ರ ಕೃಷಿ ಪದ್ಧತಿ (12 ತಿಂಗಳು) | 19 | ಪಿ.ಯು.ಸಿ. | ಎಸ್.ಟಿ | ರೂ.50 | – |
| | | | | | **ಮೊತ್ತ** | **300/–** | **6000/–** |
| | | | | | | **ಒಟ್ಟು ಮೊತ್ತ** | **6300/–** |

### 3. ಎರೆಹುಳು ಗೊಬ್ಬರ ತೊಟ್ಟಿ:

| ಇಲಾಖೆ | ಫಲಾನುಭವಿಗಳು | ಅನುಮೋದನೆಯಾದ ಅನುದಾನ | ಪ್ರಯೋಜನಗಳ ಪೂರ್ಣ ವಿವರ |
|---|---|---|---|
| ಐ.ಸಿ.ಎ.ಆರ್.–ಕೆ.ವಿ.ಕೇಂ., ರಾಯಚೂರು | 05 | 25,000/– | ಬೆಳೆ ಅವಶೇಷಗಳ ಮರುಬಳಕೆ ಮತ್ತು ಭೂ ಫಲವತ್ತತೆ ಉತ್ಕೃಷ್ಟಗೊಳಿಸಲು ಎರೆಹುಳು ಗೊಬ್ಬರ ಸಹಾಯಮಾಡುತ್ತದೆ. |

### ಎರೆಹುಳು ಗೊಬ್ಬರ ತೊಟ್ಟಿಯ ಫಲಾನುಭವಿಗಳು:

| ಕ್ರ.ಸಂ. | ರೈತರ ಹೆಸರು | ತಂದೆಯ ಹೆಸರು | ಪ್ರದೇಶ (ಎ.) | ನೀರಾವರಿಯ ಮೂಲ | ಜಾನುವಾರು | ತೊಟ್ಟಿಯ ಅಳತೆ (ಮೀ.) | ಪೋನ್ ಸಂಖ್ಯೆ |
|---|---|---|---|---|---|---|---|
| 1 | ಮಲ್ಲಪ್ಪ | ಕರಿಬಸಪ್ಪ | 2 | ಕೆರೆ | ಆಕಳು–2, ಎತ್ತು–2 ಮೇಕೆ–12 | 10x3x3 | 8152075945 |
| 2 | ಬಸಮ್ಮ | ಆದೆಪ್ಪ | 4 | ಕೆರೆ | ಎತ್ತು–2 ಮೇಕೆ–4 | 10x3x3 | 9535929685 |
| 3 | ಶಿವರಾಮ ರೆಡ್ಡಿ | ಚಂದ್ರಶೇಖರ | 8 | ಕೆರೆ | ಎತ್ತು–2 ಕುರಿ–2 | 10x3x3 | 9972841464 |
| 4 | ಮಲ್ಲಿಕಾರ್ಜುನ | ಭೀಮಪ್ಪ | 2 | ಹಳ್ಳ | ಮೇಕೆ–40 ಎತ್ತು–2 ಆಕಳು–1 | 10x3x3 | 9972000873 |
| 5 | ಶರಣೇಗೌಡ | ಹರಿಶ್ಚಂದ್ರ ಗೌಡ | 4 | ಕೊಳವೆಬಾವಿ | ಎಮ್ಮೆ–1 | 10x3x3 | 9902433384 |

**4. ಮೇವು ಬ್ಯಾಂಕ್ ಸ್ಥಾಪನೆ:**

| ಇಲಾಖೆ | ಫಲಾನುಭವಿಗಳು | ನೋಂದಣಿಯಾದ ದಿನಾಂಕ | ಪ್ರಯೋಜನಗಳ ಪೂರ್ಣ ವಿವರ |
|---|---|---|---|
| ಐ.ಸಿ.ಎ.ಆರ್.–ಕೆ.ವಿ.ಕೇಂ., ರಾಯಚೂರು | 05 | 20.06.2018 | • ಕುರಿ ಮತ್ತು ಮೇಕೆಗೆ ಸಮತೋಲಿತ ಆಹಾರವನ್ನು ಪೂರೈಸಲು ಮೇವಿನ ಬೆಳೆ ಬೀಜಗಳನ್ನು ವಿತರಿಸಲಾಯಿತು<br>• ರೈತರಿಗೆ ವಿತರಿಸಿದ ಬೀಜಗಳು ಉತ್ಪಾದನೆಯಲ್ಲಿ ಸಹ ತೊಡಗಿಸಿಕೊಂಡಿದ್ದಾರೆ. (ಬಹುವಾರ್ಷಿಕ ಕಟಾವಿನ ಬೆಳೆ CoFS-29, ಬೇಲಿ ಮೆಂತ್ಯೆ, ಕುದುರೆ ಮೆಂತ್ಯೆ, ಚೊಗಚೆ ಗಿಡ) |

**5.ಆಯ್ಕೆಯಾದ ಗ್ರಾಮದ ರೈತರ ಕಲ್ಯಾಣ ವೃದ್ಧಿ (ಉದಾ: ಆರೋಗ್ಯ, ನೈರ್ಮಲ್ಯ, ಕೌಶಲ್ಯಾಭಿವೃದ್ಧಿ, ಇತರೆ) ಇತ್ಯಾದಿಗಳ ಬಗ್ಗೆ ಕೈಗೊಂಡ ಕಾರ್ಯಕ್ರಮ ಮತ್ತು ಫಲಿತಾಂಶ:**

| ಕ್ರ.ಸಂ. | ಇಲಾಖಾವಾರು ಚಟುವಟಿಕೆಗಳು | ಸಂಖ್ಯೆ | ಫಲಾನುಭವಿಗಳು | ಪರಿಣಾಮ/ಉಪಯೋಗ |
|---|---|---|---|---|
| 1 | ಅರೋಗ್ಯ ಶಿಬಿರ, ಮಣಿಪಾಲ (ಕೆ.ಎಂ.ಸಿ.) | 01 | 100 | • ಶಿಬಿರದಲ್ಲಿ ಕೈಗೊಂಡ ವಿವಿಧ ತಪಾಸಣೆಗಳ ಪೈಕಿ ಗ್ರಾಮದ ರೈತರ ರಕ್ತದ ಮಾದರಿಗಳಲ್ಲಿ ಶೇ.52 ರಷ್ಟು ಪೀಡೆನಾಶಕಗಳ ಅಂಶ ಕಂಡುಬಂದಿದ್ದು, ರಕ್ತದ ಒತ್ತಡ, ಸಕ್ಕರೆ ಖಾಯಿಲೆ ಹೆಚ್ಚಾಗಿರುತ್ತದೆ<br>• ಇದಕ್ಕೆ ಪೂರಕವಾಗಿ ರೈತರು ಆಹಾರ ಪದ್ಧತಿ ಬದಲಾಯಿಸಿದ್ದು ಹಾಗೂ ಪೀಡೆನಾಶಕ ಸಿಂಪರಣೆಗಾಗಿ 100 ಜನ ರೈತರಿಗೆ ಪೀಡೆನಾಶಕ ಸುರಕ್ಷಿತ ಕಿಟ್‌ಗಳನ್ನು |

| | | | | |
|---|---|---|---|---|
| | | | | ವಿತರಿಸಲು ಯೋಜಿಸಲಾಗಿದೆ |
| 2 | ಪಶು ಆರೋಗ್ಯ ಶಿಬಿರ | 02 | ಜಕ್ಕಲದಿನ್ನಿ ಗ್ರಾಮಸ್ಥರ ಎಲ್ಲಾ ಪಶುಗಳಿಗೆ | ಗ್ರಾಮದ ಎಲ್ಲಾ ಪಶುಗಳಿ ವಿವಿಧ ರೋಗಗಳಿಗೆ ಮುಂಜಾಗ್ರತಾ ಕ್ರಮವಾಗಿ (ವಿಶೇಷವಾಗಿ ಕಾಲುಬಾಯಿ ರೋಗ) ಚುಚ್ಚುಮದ್ದು ಹಾಕಿಸಲಾಗಿದೆ. |
| 3 | ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಣ್ಣುಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ಸ್ ನೀಡಲಾಗಿದೆ | 01 | 80 | – |
| 4 | ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಸಹಯೋಗದಲ್ಲಿ ದಿನಾಂಕ: 02.10.2018 ರಂದು ಸ್ವಚ್ಛತಾ ಅಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು | 1 | ಜಕ್ಕಲದಿನ್ನಿಯ ಎಲ್ಲಾ ಗ್ರಾಮಸ್ಥರು | ಈ ಅಂದೋಲನದಲ್ಲಿ ಗ್ರಾಮಸ್ಥರು, ಶಾಲಾಮಕ್ಕಳು ಹಾಗೂ ಶಿಕ್ಷಕರು ಭಾಗವಹಿಸಿದ್ದು ಆರೋಗ್ಯದಲ್ಲಿ ಸ್ವಚ್ಛತೆಯ ಮಹತ್ವ ಹಾಗೂ ಪರಿಸರ ನೈರ್ಮಲ್ಯಕ್ಕೆ ಗಿಡಮರಗಳ ಅವಶ್ಯಕತೆ ಕುರಿತು ಅರಿವು ಮೂಡಿಸಿ ಸಸಿಗಳನ್ನು ನೆಡಲಾಯಿತು |
| 5 | ಭಾರತೀಯ ಕೃಷಿ ಕೌಶಲ್ಯ ಮಂಡಳಿ ಅಡಿಯಲ್ಲಿ ರಾಯಚೂರು ಕೆ.ವಿ.ಕೇಂ. ವತಿಯಿಂದ ಗುಣಮಟ್ಟದ ಬೀಜೋತ್ಪಾದನೆ ತರಬೇತಿ ಕಾರ್ಯಕ್ರಮ | 05 | 05 | • ಈ ತರಬೇತಿಯು 25 ದಿವಸಗಳ ಕಾಲ ಹಮ್ಮಿಕೊಳ್ಳಲಾಗಿದ್ದು ಶೇಂಗಾ, ಹತ್ತಿ, ಹೆಸರು ಮುಂತಾದ ಬೀಜೋತ್ಪಾದನೆ ಬಗ್ಗೆ ತರಬೇತಿ ನೀಡಲಾಯಿತು |
| 6 | ಜಕ್ಕಲದಿನ್ನಿ ಗ್ರಾಮದ ನೈರ್ಮಲ್ಯ, ಮೂಲ ಸೌಕರ್ಯ ಮತ್ತು ಸಾಮಾಜಿಕ ಸಮಸ್ಯೆಗಳ ಸಮೀಕ್ಷೆ ಮಾಡಲಾಗಿದೆ | 1 | ಜಕ್ಕಲದಿನ್ನಿ ಗ್ರಾಮ | – |

## 6. ರೈತರ ಸಾಮರ್ತ್ಯಾಭಿವೃದ್ಧಿ ಸಕಾರಾತ್ಮಕ ಮನೋಭಾವಕ್ಕೆ ಮಾಡಿರುತ್ತಕ್ಕಂತ ಕಾರ್ಯಕ್ರಮ ಮತ್ತು ಪರಿಣಾಮ:

| ಕ್ರ.ಸಂ. | ಕಾರ್ಯಕ್ರಮಗಳು |
|---|---|
| 1 | ತರಬೇತಿ ಕಾರ್ಯಕ್ರಮಗಳು |
| 2 | ತಂತ್ರಜ್ಞಾನಗಳ ವರ್ಗಾವಣೆ |
| 3 | ಗ್ರಾಮ ಸಭೆ |
| 4 | ತಂತ್ರಜ್ಞಾನದ ವರ್ಗಾವಣೆಗಾಗಿ ಆಡಿಯೋ ವಿಡಿಯೋ ಕಿಟ್‌ಗಳು |
| 5 | ಪ್ರಗತಿಪರ ರೈತರ ಕ್ಷೇತ್ರಕ್ಕೆ ಕ್ಷೇತ್ರ ಭೇಟಿ |
| 6 | ಬೆಳೆ ವಿಚಾರ ಸಂಕಿರಣ |
| 7 | ತೋಟಗಾರಿಕ ಬೆಳೆಗಳ ಬಗ್ಗೆ ವಿಚಾರ ಸಂಕಿರಣ |
| 8 | ರೇಡಿಯೋ ವಿತರಿಸಲಾಗಿದೆ |
| 9 | ಕಿರುಹೊತ್ತಿಗೆ ಮುದ್ರಣ ಮತ್ತು ವಿತರಣೆ |
| 10 | ವಿವಿಧ ಸರ್ಕಾರಿ ಇಲಾಖೆಗಳಿಂದ ಲಭ್ಯವಿರುವ ಯೋಜನೆಗಳ ಮಾಹಿತಿಯ ಬಗ್ಗೆ ಕರಪತ್ರಗಳನ್ನು ಪ್ರಕಟಿಸಿದೆ |

**ತಂತ್ರಜ್ಞಾನಗಳ ವರ್ಗಾವಣೆ:**

- ಸುಧಾರಿತ ಮೇವಿನ ಬೀಜಗಳ ಬೇಸಾಯ
- ಹೈನುಗಾರಿಕೆ ಮತ್ತು ಕುರಿ ಸಾಕಾಣಿಕೆಯಲ್ಲಿ ಸಮತೋಲಿತ ಆಹಾರ ಪದ್ಧತಿ ಬಳಕೆ ತರಬೇತಿ
- ವೈಜ್ಞಾನಿಕ ಪದ್ಧತಿಯಲ್ಲಿ ಟಗರು ಮರಿ ಸಾಕಾಣಿಕೆಯ ತರಬೇತಿ
- ವೈಜ್ಞಾನಿಕ ಪದ್ಧತಿಯಲ್ಲಿ ಹಿತ್ತಲಲ್ಲಿ ಕೋಳಿ ಸಾಕಾಣಿಕೆ
- ಹಿತ್ತಲಲ್ಲಿ ಸಾಕುವ ಕೋಳಿಗೆಳಿಗೆ ಕೊಕ್ಕರೆ ರೋಗದ ವಿರುದ್ಧ (RKT) ಲಸಿಕೆಯ ಮಹತ್ವ
- ಕೃಷಿಯಲ್ಲಿ ಅಣಬೆ ಉತ್ಪಾದನೆಯ ತರಬೇತಿ
- ಸಿರಿಧಾನ್ಯಗಳ ಹಾಗೂ ಧಾನ್ಯಗಳ ಮೌಲ್ಯವರ್ಧನೆ
- ಗೋಡಂಬಿ ಬೆಳೆಯ ಪರಿಚಯ ಮಾಡಿಸಲಾಗಿದೆ
- ಇರುಳ್ಳಿ ಉತ್ಪಾದನೆ ಹೆಚ್ಚಿಸಲಾಗಿದೆ
- ಶ್ರೇಣಿಕರಿಸುವ ಸಾಧನದಿಂದ ಧಾನ್ಯಗಳ ವಿಂಗಡಣೆ
- ಸೂಕ್ಷ್ಮ ನೀರಾವರಿ
- ಭತ್ತದ ನೇರ ಕೂರಿಗೆ ಬಿತ್ತನೆ ಪರಿಚಯ
- ಬೀಜೋತ್ಪಾದನೆ
- ಅನಪೇಕ್ಷಿತ ಸಸ್ಯನಾಶಕ ಬಳಕೆ
- ಕ್ಷೇತ್ರಗಳಲ್ಲಿ ಸಮಗ್ರ ಪೋಷಕಾಂಶ ಬೆಳೆ ನಿರ್ವಹಣೆ
- ಮಣ್ಣಿನ ಮಾದರಿ ತಂತ್ರಜ್ಞಾನಗಳು

## ಗ್ರಾಮ ಸಭೆಗಳಲ್ಲಿ ವಿವಿಧ ಇಲಾಖೆಗಳ ಸಂಪನ್ಮೂಲ ವ್ಯಕ್ತಿಗಳಿಂದ ತಂತ್ರಜ್ಞಾನದ ಮಾಹಿತಿ

- ನಬಾರ್ಡ್– ಎಫ್.ಪಿ.ಒ.
- ತೋಟಗಾರಿಕೆ ಇಲಾಖೆ– ಬೆಳೆವಿಮೆ
- ಕೃಷಿ ಇಲಾಖೆ– ಫಸಲ ಭೀಮಾ ಯೋಜನೆ
- ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ– ಜಾನುವಾರುಗಳಿಗೆ ವಿಮೆ
- ಮಣಿಪಾಲ ಅಸ್ಪತ್ರೆ– ಅರೋಗ್ಯ ತಪಾಸಣೆ

### ಬೆಳೆ ವಿಚಾರ ಸಂಕಿರಣ

| ಇಲಾಖೆ | ಫಲಾನುಭವಿಗಳು | ದಿನಾಂಕ | ಪ್ರಯೋಜನಗಳ ಪೂರ್ಣ ವಿವರ |
|---|---|---|---|
| ಐ.ಸಿ.ಎ.ಆರ್.–ಕೆ.ವಿ.ಕೇಂ., ರಾಯಚೂರು, FACT Private company ltd and Dept. of Agriculture | 80 | 16.11.2018 | • ಬೆಳೆ ವಿಚಾರ ಸಂಕಿರಣದಲ್ಲಿ ರೈತರು, ವಿಜ್ಞಾನಿಗಳು, ಇಲಾಖಾ ಅಧಿಕಾರಿಗಳು ಹಾಗೂ ಕಂಪನಿ ಪ್ರತಿನಿಧಿಗಳ ನಡುವೆ ಸಂವಾದವನ್ನು ಏರ್ಪಡಿಸಲಾಗಿದೆ<br>• ಈ ಕಾರ್ಯಕ್ರಮದಲ್ಲಿ ತೊಗರಿ, ಕಡಲೆ, ಮೆಣಸಿನಕಾಯಿ, ಹತ್ತಿಯಲ್ಲಿ ಬರುವ ಕೀಟ ಮತ್ತು ರೋಗಗಳ ಕುರಿತು ಚರ್ಚೆ ನಡೆಯಿತು<br>• ಪೋಷಕಾಂಶಗಳ ಸಮರ್ಥ ಬಳಕೆ, ಬೇವು ಲೇಪನ ಯೂರಿಯ ಮತ್ತು ಸೂಕ್ಷ್ಮ ಪೋಷಕಾಂಶಗಳ ಪ್ರಾಮುಖ್ಯತೆಯ ಬಗ್ಗೆ ಮಾಹಿತಿ ತಿಳಿಸಲಾಯಿತು<br>• ಸೈನಿಕ ಹುಳುವಿನ ಹಾನಿಕಾರಕ ಲಕ್ಷಣಗಳು ಮತ್ತು ಅದರ ನಿರ್ವಹಣೆಯ ಜಾಗೃತಿ ಮೂಡಿಸಲಾಯಿತು<br>• ಎಲ್ಲಾ ರೈತರಿಗೆ ಫಸಲ ಭೀಮಾ ಯೋಜನೆಯ ಮಾಹಿತಿ ನೀಡಲಾಯಿತು |

## 7. ಯೋಜನೆಗೆ ಪೂರಕವಾದಂತಹ ಇತರೆ ಪ್ರಮುಖ ವಿಚಾರಗಳಲ್ಲಿನ ಪ್ರಗತಿ.

| ಕ್ರ.ಸಂ. | ಕಾರ್ಯಕ್ರಮಗಳು |
|---|---|
| 1 | ರಾಯಚೂರು ಕೃಷಿ ವಿಜ್ಞಾನ ಕೇಂದ್ರದ ಸಹಕಾರದಿಂದ ಜಕ್ಕಲದಿನ್ನಿ ಗ್ರಾಮದ ರೈತರಿಗೆ ಕಾಲುವೆ ನೀರನ್ನು ಕೃಷಿ ಚಟುವಟಿಕೆಗಳಿಗೆ ಸರಬರಾಜು ಮಾಡಿಸಲಾಯಿತು<br>**ಇದರಿಂದಾದ ಲಾಭಗಳು:**<br>• **2016–17ನೇ ಸಾಲಿನಲ್ಲಿ ಮೆಣಸಿನಕಾಯಿ ಮತ್ತು ಹತ್ತಿ ಬೆಳೆಗೆ ನಾಲ್ಕು ಭಾರಿ ಕಾಲುವೆ ನೀರನ್ನು ಜಿಲ್ಲಾಧಿಕಾರಿಗಳ ವತಿಯಿಂದ 100 ಎಕರೆಗೆ ಮೆಣಸಿನಕಾಯಿ ಹಾಗೂ ಹತ್ತಿ ಬೆಳೆಗೆ ಬಿಡಿಸಲಾಗಿದೆ.**<br>• **ಒಂದು ಎಕರೆಗೆ ರೂ. 5000 ಗಳಂತೆ 100 ಎಕರೆಗೆ ನಾಲ್ಕುಭಾರಿ ರೂ.20,00,000 (ಇಪ್ಪತ್ತು ಲಕ್ಷ ರೂಪಾಯಿಳು) ಉಳಿತಾಯವಾಗಿದೆ ಹಾಗೂ ನೀರಿನ ಉಪಯೋಗದಿಂದ ಉತ್ತಮ ಬೆಳೆಯನ್ನು ಬೆಳೆಯಾಲಾಗಿದೆ.**<br>• **ಇದರಿಂದ 3 ಕೋಟಿ ರೂಪಾಯಿ ಲಾಭವನ್ನು ಜಕ್ಕಲದಿನ್ನಿ ಗ್ರಾಮದ ರೈತರು ಪಡೆದಿರುತ್ತಾರೆ**<br>• **2018–19ನೇ ಸಾಲಿನಲ್ಲಿ 92/1 ಕಾಲುವೆಯ ನೀರು ಆಕ್ರಮವಾಗಿ ಬೇರೆ ಗ್ರಾಮದ ರೈತರಿಗೆ ಹರಿಬಿಡಲಾಗಿದ್ದು ಇದನ್ನು ಜಿಲ್ಲಾಧಿಕಾರಿ, ನೀರಾವರಿ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರ ಗಮನಕ್ಕೆ ತಂದು, ಅವರ ಸಹಾಯದಿಂದ ಬರಗಾಲ ಸಮಯದಲ್ಲಿ ನೀರು ಪೂರಕವಾಗಿ ಹಳ್ಳಿಗೆ ಹರಿದುಬರುವಂತಾಯಿತು. ಇದರಿಂದ ಹತ್ತಿ, ಮೆಣಸಿನಕಾಯಿ, ಜೋಳ, ಕಡಲೆ ಹಾಗೂ ತೊಗರಿ ಬೆಳೆಗಳಿಗೆ ನೀರಿನ ಸದುಪಯೋಗವಾಯಿತು ಹಾಗೂ ರೈತರ ಆದಾಯವೃದ್ಧಿಯಾಗಿದೆ.** |
| 2 | ಸಂಸ್ಕರಣ ಘಟಕವನ್ನು ಒದಗಿಸುವುದು (ಪ್ರಗತಿಯಲ್ಲಿದೆ) |
| 3 | ರೈತ ಉತ್ಪಾದಕ ಸಂಘ ಹಾಗೂ ಇತರೆ ಸಂಸ್ಥೆಗಳಲ್ಲಿ ನೋಂದಣಿ ಮಾಡಿಸಲಾಗಿದೆ |
| 4 | ಕೃಷಿ ಯಂತ್ರೋಪಕರಣಗಳ ಮೇಲೆ ಒಂದು ದಿನದ ಕಾರ್ಯಗಾರ |
| 5 | ವಿಶೇಷ ದಿನದ ಕಾರ್ಯಕ್ರಮಗಳ ಆಚರಣೆ: "ರೈತರ ದಿನಾಚರಣೆ" |
| 6 | ಸಾಧಕರೊಂದಿಗೆ ಕೃಷಿ ಸಂವಾದ ಕಾರ್ಯಕ್ರಮ |
| 7 | ಪೂರ್ವ ಹಿಂಗಾರು ಅಭಿಯಾನ ಮತ್ತು ರೈತ ಸಮ್ಮೇಳನ |

## ಆವಿಷ್ಕಾರಿ ರೈತನ ಯಶೋಗಾಥೆ

**ರೈತರ ಹೆಸರು** : ಶ್ರೀ ಅಮರೇಶ ಕೋಟೆ ತಂದೆ ಶರಣಪ್ಪ ಕೋಟೆ

**ಜಕ್ಕಲದಿನ್ನಿ, ತಾ:** ಮಾನ್ವಿ (ಸಿರವಾರ), ರಾಯಚೂರು (ಜಿಲ್ಲೆ)

**ಮೊ:** 8861233616

ವಿಶೇಷ ಸಾಧನೆ:

- ಕ್ಷೇತ್ರ : 18 ಎಕರೆ
- ಹತ್ತಿ, ಮೇಣಸಿನಕಾಯಿ, ಭತ್ತ, ಸಜ್ಜೆ ಮೆಕೇಜೋಳ, ಬದನೆಕಾಯಿ, ಟೋಮ್ಯಾಟೊ, ಕೊತ್ತಂಬರಿ ಮತ್ತು ಮೆಂತೆ.
- ಎತ್ತು, ಎಮ್ಮೆ ಆಕಳು ಸಾಕಾಣಿಕೆ
- ಕೃಷಿಯಲ್ಲಿ ಖರ್ಚು ಕಡಿಮೆ ಮಾಡಲು ಅವರು ಸ್ವತ ತಾವೆ ತಯಾರಿಸಿದ ರಸಗೊಬ್ಬರ ಬಿತ್ತುವ ಎಡೆ ಕುಂಟೆ ಹಾಗೂ ಡ್ರಿಪ್ ಸುತ್ತುವ ಕೈಚಾಲಿತ ಮಿಷನ್ ಕಂಡು ಹಿಡಿದಿದ್ದು.
- ಕೃಷಿಯಲ್ಲಿ ಖರ್ಚು ಕಡಿಮೆ ಮಾಡಿ ಸಾದನೆ ಮಾಡಿದ್ದಾರೆ
- ಕೃಷಿ ಹೊಂಡ ನಿರ್ಮಿಸಿ ಅದಕ್ಕೆ ಡ್ರಿಪ್ ಅಳವಡಿಸಿದ್ದಾರೆ
- ಇವರ ಒಟ್ಟು ಆದಾಯ

❖ ಮೆಣಸಿನಕಾಯಿಂದ: 80,000/ಎಕರೆ

❖ ಹತ್ತಿ ಬೆಳೆಯಲ್ಲಿ 35,000/ಎಕರೆ

❖ ಮೇಕೆಜೋಳ 15,000/ಎಕರೆ

❖ ಟೋಮ್ಯಾಟೊ–28,000/ಎಕರೆ

❖ ಜೋಳ 20,000/ಎಕರೆ

ನಿವ್ವಳ ಆದಾಯ: 5ಲಕ್ಷ

### ಅನುದಾನದ ಬಳಕೆ ವಿವರ

| ಕೃಷಿ ವಿಜ್ಞಾನ ಕೇಂದ್ರ, ರಾಯಚೂರು | 2016–17 | | 2017–18 | | 2018–19 | |
|---|---|---|---|---|---|---|
| | ಹಂಚಿಕೆ ಮಾಡಲಾದ ಅನುದಾನ | ಖರ್ಚು | ಹಂಚಿಕೆ ಮಾಡಲಾದ ಅನುದಾನ | ಖರ್ಚು | ಹಂಚಿಕೆ ಮಾಡಲಾದ ಅನುದಾನ | ಖರ್ಚು |
| | 1500000.00 | 0.00 | 150000.00 | 1203766.00 | 1000000.00 | 608196.00 |
| | | ಒಟ್ಟು ಮೊತ್ತ | 150000.00 | 1203766.00 | 1000000.00 | 608196.00 |
| **ಸೂಚನೆ: ಹಿಂದಿನ ವರ್ಷ ಬಳಕೆ ಮಾಡದೆ ಉಳಿದಿರುವ ಮೊತ್ತ ರೂ. 6,88,038** | | | | | | |

## ಬೀಜ ವಿತರಣೆ ಮತ್ತು ತರಬೇತಿ ಕಾರ್ಯಕ್ರಮ






## ಭತ್ತದಲ್ಲಿ ಉಪ್ಪು ಸಹಿಷ್ಣು ವಿಧದ ಪ್ರಾತ್ಯಕ್ಷಿಕೆ





## ಗ್ರಾಮ ಸಭೆ





ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಜಿಲ್ಲಾಧಿಕಾರಿಗಳಿಗೆ ಜಕ್ಕಲದಿನ್ನಿ ಗ್ರಾಮದ ರೈತರಿಂದ ಮನವಿ ಪತ್ರ





ಕೆರೆ

ಕೃಷಿ ಹೊಂಡ





ಗಿರಿರಾಜ ಕೋಳಿಗಳ ವಿತರಣೆ





**ತರಕಾರಿ ಬೀಜಗಳ ಕಿಟ್ ವಿತರಣೆ**

**ಮೇವು ಬೀಜಗಳ ಕಿಟ್ ವಿತರಣೆ**







**ಮಣ್ಣು ಆರೋಗ್ಯ ಚೀಟಿ ವಿತರಣೆ**

**ಎರೆಹುಳು ಗೊಬ್ಬರ ತೊಟ್ಟಿ**





**ಆರೋಗ್ಯ ಶಿಬಿರ**







## ಕೆ.ಎಂ.ಸಿ. ಯಿಂದ ಆರೋಗ್ಯ ವಿಮೆ





## ಪಶು ಆರೋಗ್ಯ ಶಿಬಿರ





## ಹೆಣ್ಣು ಮಕ್ಕಳ ಆರೋಗ್ಯ ಶಿಬಿರ





# ಗುಣಮಟ್ಟದ ಬೀಜೋತ್ಪಾದನೆ ತರಬೇತಿ ಕಾರ್ಯಕ್ರಮ





## ನೈರ್ಮಲ್ಯ, ಮೂಲ ಸೌಕರ್ಯ ಹಾಗೂ ಸಾಮಾಜಿಕ ಸಮಸ್ಯೆ ಕುರಿತು ರಾಜ್ಯ ಮಟ್ಟದ ಕಾರ್ಯಗಾರ





## ತಂತ್ರಜ್ಞಾನ ವರ್ಗಾವಣೆಗಾಗಿ ಆಡಿಯೋ, ವಿಡಿಯೋ ಕಿಟ್ ವಿತರಣೆ ಮತ್ತು ಪ್ರದರ್ಶನ





**ತುಂಗಭದ್ರಾ 92/1 ಕಾಲುವೆಯ ಆಕ್ರಮವಾಗಿ ನೀರಿನ ಹರಿವನ್ನು ತಡೆದು ಜಕ್ಕಲದಿನ್ನಿ ಗ್ರಾಮದ ರೈತರ ಹೊಲಗಳಿಗೆ ಹಾಯಿಸಿದ್ದು**








**ಪ್ಯಾಕ್ಟ್ ಕಂಪನಿಯ ಬೆಳೆ ವಿಚಾರ ಸಂಕಿರಣ ತರಬೇತಿ ಕಾರ್ಯಕ್ರಮ**






**ಟಾಫೆ ಕಂಪನಿಯ ಒಂದು ದಿನದ ಯಂತ್ರೋಪಕರಣಗಳ ಕಾರ್ಯಗಾರ**











# ರೈತರು ಆವಿಷ್ಕರಿಸಿದ ಯಂತ್ರಗಳು





ದತ್ತು ಗ್ರಾಮವಾದ ಜಕ್ಕಲದಿನ್ನಿಯ ಪ್ರಗತಿಪರ ರೈತನಾದ ಶ್ರೀ ಅಮರೇಶಕೋಟೆ ಅವರು ಆವಿಷ್ಕಾರ ರೈತರ ಸಮ್ಮೇಳನಕ್ಕೆ ಆಯ್ಕೆಯಾಗಿರುತ್ತಾರೆ. ದಿನಾಂಕ: 16,17.07.2019, ಪೂಸಾ ಕ್ಯಾಂಪಾಸ್, ನ್ಯೂಡೆಲ್ಲಿ





# ಪತ್ರಿಕೆ ವರದಿ



2 ಗುರುವಾರ • ಜುಲೈ 20, 2017

ರಾಯಚೂರು: ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಸಲಹೆ

## ಎಪಿಎಂಸಿಗಳ ಸಾಮರ್ಥ್ಯ ಹೆಚ್ಚಿಸಬೇಕು

- ವಿವಿಧ ರಾಜ್ಯಗಳಿಂದ ಪ್ರತಿನಿಧಿಗಳು ಭಾಗಿ
- 'ಆಧುನಿಕ ಮಾರುಕಟ್ಟೆ' ತಿಳುವಳಿಕೆಗೆ ಬಿಡುಗಡೆ
- ಮಾರುಕಟ್ಟೆ ಸುಧಾರಣೆಗಾಗಿ ಸಂವಾದ

### ಕೇಂದ್ರದ ಸಾಧನೆ ಜನರಿಗೆ ತಿಳಿಸಿ: ಪಾಪಾರೆಡ್ಡಿ



## ಮಾದರಿ ಸಮಗ್ರ ಕೃಷಿ ಗ್ರಾಮ ಜಕ್ಕಲದಿನ್ನಿ

### ರೈತ ಆದಾಯ ಮತ್ತು ಕಲ್ಯಾಣ ವೃದ್ಧಿ ಪ್ರಾಯೋಗಿಕ ಯೋಜನೆಗೆ ಆಯ್ಕೆಯಾದ ಅಪರೂಪದ ಹಳ್ಳಿ

### ರೈತರು ಬೆಲೆ ನಿರ್ಧಾರಕರಾಗಬೇಕು

### ರಾಜಕೀಯ ನೆಲೆಯಾಗುತ್ತಿರುವ ಎಪಿಎಂಸಿ

ಕೇಂದ್ರದ ಮಾದರಿ ಕಾಯ್ದೆ ಜಾರಿಗೆ

ಇದರಲ್ಲಿ ಏನೇನಿದೆ?

ಜಕ್ಕಲದಿನ್ನಿ ಗ್ರಾಮದಲ್ಲಿ ರೈತ ಆದಾಯ ಮತ್ತು ಕಲ್ಯಾಣ ವೃದ್ಧಿ ಪ್ರಾಯೋಗಿಕ ಯೋಜನೆ ಕಚೇರಿ ಆರಂಭಿಸಲಾಗಿದೆ.



## ಸಮನ್ವಯತೆ ಅಗತ್ಯ

### ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ ಕಮ್ಮರಡಿ ಸಲಹೆ

ರಾಯಚೂರು ಜಿಪಂ ಜಲನಿರ್ಮಲ ಸಭಾಂಗಣದಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ ಕಮ್ಮರಡಿ ಸಭೆ ನಡೆಸಿದರು.

ಕರ್ನಾಟಕದ ಉತ್ತಮ ಅಡಿಕೆ ಉತ್ಕೃಷ್ಟ ಸ್ವಾದ
Saffron Blended Premium Super gem PAN MASALA
NOT FOR MINORS
ನಿಮ್ಮದೇ ಅಡಿಕೆ ನಿಮ್ಮೆಲ್ಲರ ಬಯಕೆ
3.25 ಗ್ರಾಂ

■ ವಿಜಯವಾಣಿ ಸುದ್ದಿಜಾಲ ರಾಯಚೂರು

ರೈತರ ಆದಾಯ, ಅಭಿವೃದ್ಧಿಗಾಗಿ ಆಯ್ಕೆಯಾದ ಜಕ್ಕಲದಿನ್ನಿಯ ಸಮಗ್ರ ಅಭಿವೃದ್ಧಿಗೆ ಎಲ್ಲ ಇಲಾಖೆಗಳು ಸಮನ್ವಯತೆಯೊಂದಿಗೆ ಸಹಕರಿಸಲು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ ಕಮ್ಮರಡಿ ಸಲಹೆ ನೀಡಿದರು.

ನಗರದ ಜಿಪಂ ಜಲನಿರ್ಮಲ ಸಭಾ ಭವನದಲ್ಲಿ ಗುರುವಾರ ನಡೆದ ಮಾನ್ವಿ ತಾಲೂಕಿನ ಜಕ್ಕಲದಿನ್ನಿ ಗ್ರಾಮದ ರೈತರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರೈತ ಆದಾಯ ಕಲ್ಯಾಣ ವೃದ್ಧಿ ಪ್ರಾಯೋಗಿಕ ಯೋಜನೆಗೆ ಆಯ್ಕೆಯಾದ ರಾಜ್ಯದ ಎಂಟು ಗ್ರಾಮಗಳ ಪೈಕಿ ಜಕ್ಕಲದಿನ್ನಿ ಕೂಡ ಒಂದು. ಇಲ್ಲಿನ ರೈತರ ಆರ್ಥಿಕ ಸ್ಥಿತಿ, ಸರ್ಕಾರಿ ಯೋಜನೆಗಳಿಂದ ಬದಲಾಗುವ ಪರಿಸ್ಥಿತಿ ಪರಾಮರ್ಶಿಸಲಾಗುವುದು. ಈ ಪ್ರಾಯೋಗಿಕ ಯೋಜನೆ ಆಧರಿಸಿ 2018ನೇ ಸಾಲಿನ ಬಜೆಟ್ ಪೂರ್ವ ಸರ್ಕಾರಕ್ಕೆ ಸಂಪೂರ್ಣ ನೀಲಿನಕ್ಷೆ ಸಲ್ಲಿಸಲಾಗುವುದು ಎಂದರು.

ಎಪಿಎಂಸಿಯಲ್ಲಿ 100ಕ್ಕೆ 3 ರೂ.ನಂತೆ ಅನಧಿಕೃತ ತೆರಿಗೆ ಕಡಿತ, ತೂಕದಲ್ಲಿ ಕಡಿತದ ಬಗ್ಗೆ ರೈತರು ಗಮನಕ್ಕೆ ತಂದಾಗ ಎಪಿಎಂಸಿ ಅಧಿಕಾರಿಗಳಿಂದ ಕಮ್ಮರಡಿ ಸ್ಪಷ್ಟನೆ ಕೇಳಿದರು. ರೈತರು ವರ್ತಕರಿಂದ ಮುಂಗಡ ಸಾಲ ಪಡೆದಿರುವ ಕಾರಣ ವರ್ತಕರು ಬಡ್ಡಿ ಹಣದಲ್ಲಿ ಕಡಿತಗೊಳಿಸುತ್ತಾರೆ ಎಂದು ಎಪಿಎಂಸಿ ಅಧಿಕಾರಿ ಮಾಹಿತಿ ನೀಡಿದ್ದಕ್ಕೆ ತೃಪ್ತರಾಗದೇ ವ್ಯವಹಾರ ಬೇರೆ, ಮಾರಾಟ ಬೇರೆ. ನಿಯಮ ಪಾಲನೆ ಮುಖ್ಯ ಎಂದರು.

ಖಾತ್ರಿಯಡಿ ರೈತರ ಒಂದು ಎಕರೆ ಹೊಲಕ್ಕೆ 400 ಸಸಿ ನೆಡಲು ಅವಕಾಶವಿದ್ದು, ಒಂದು ಗಿಡಕ್ಕೆ ಸರ್ಕಾರದ ಸಹಾಯಧನ ಕೂಡ ಸಿಗುತ್ತದೆ. ಬೇವು, ಹೆಬ್ಬೇವು, ತೇಗ, ಸಾಗವಾನಿ ಸೇರಿ ಹೆಕ್ಟೇರ್‌ಗೆ ಸಾವಿರ ಸಸಿ ವಿತರಿಸಲಾಗುವುದು ಎಂದು ಅರಣ್ಯ ಇಲಾಖಾಧಿಕಾರಿ ಮಾಹಿತಿ ನೀಡಿದರು.

ಸಿಇಒ ಕೂರ್ಮಾರಾವ್ ಪ್ರತಿಕ್ರಿಯಿಸಿ, ಆಗಸ್ಟ್ ಮೊದಲ ವಾರ ಆರೋಗ್ಯ ತಂಡ ಗ್ರಾಮಕ್ಕೆ ಭೇಟಿ ನೀಡಿ, ನೀರಿನ ಮೂಲ ಪರೀಕ್ಷಿಸಲಾಗುವುದು ಎಂದರು. ಡಿಸಿ ಡಾ.ಬಗಾದಿ ಗೌತಮ ಮಾತನಾಡಿದರು. ಕೃಷಿ ವಿಜ್ಞಾನಿ ಡಾ.ರವಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ವಿಶೇಷ ದಿನಗಳ ಆಚರಣೆ























